ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಐಸಿಸಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದಕ್ಕೆ ಶ್ರೀಲಂಕಾದ ಸ್ಪಿನ್ನರ್ ಪ್ರಭಾತ್ ಜಯಸೂರ್ಯಗೆ ವಾಗ್ದಂಡನೆ ವಿಧಿಸಲಾಗಿದೆ. ಅವರ ಶಿಸ್ತಿನ ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸೇರ್ಪಡೆ ಮಾಡಲಾಗಿದೆ.

26 ಆಗಸ್ಟ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -164 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು? » 2



ಮಕ್ಕಳಲ್ಲಿ ಶಿಸ್ತು, ದೇಶಪ್ರೇಮ ಬೆಳೆಸುವುದೇ ಶಿಕ್ಷಣ » 3



ನೈಸ್ ರಾದ್ಧಾಂತ: ರಾಜ್ಯಪಾಲರಿಗೆ ಜೆಡಿಎಸ್ ದೂರು » 4

# ಅನುದಾನ ಚಿಂತೆ ಬಿಡಿ, ಅಭಿವೃದ್ಧಿಗೆ ಆದ್ಯತೆ ನೀಡಿ

## ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆ | ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ವಿಧಾಮಂಡಲ ಅಧಿವೇಶನ ಮುಂದೂಡಿದ ಬೆನ್ನಲ್ಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉಸ್ತುವಾರಿ ಸಚಿವರು, ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆ ನಡೆಸಿ ಕ್ಷೇತ್ರದ ಸಮಸ್ಯೆಗಳನ್ನು ಆಲಿಸಿದರು.

ಮಂಗಳವಾರ ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣದಲ್ಲಿ ಶಾಸಕರೊಂದಿಗೆ ನಡೆದ ಸಭೆಯಲ್ಲಿ ಪ್ರತಿಯೊಂದು ಜಿಲ್ಲೆಯ ಶಾಸಕರ ಜೊತೆಗೆ ಪ್ರತ್ಯೇಕವಾಗಿ ಸಭೆ ನಡೆಸಿ ಮುಂದಿನ ದಿನಗಳಲ್ಲಿ ಯಾವ ರೀತಿಯಲ್ಲಿ ಜಿಲ್ಲಾವಾರು ಅಭಿವೃದ್ಧಿ ಕೆಲಸ ಕಾರ್ಯಗಳು ಆಗಬೇಕು. ಮುಂಬರುವ ಚುನಾವಣೆಗೆ ಯಾವ ರೀತಿಯಲ್ಲಿ ಸಿದ್ಧಗೊಳ್ಳಬೇಕೆಂಬ ಬಗ್ಗೆ ಸೂಚನೆ ನೀಡಿದರು.

ರಸ್ತೆ, ಮೂಲಸೌಕರ್ಯ, ಅಭಿವೃದ್ಧಿ ವಿಚಾರವಾಗಿ ಶಾಸಕರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನ ಸೆಳೆದರು. ಕ್ಷೇತ್ರವಾರು ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಬಿಡುಗಡೆಗೆ ಮನವಿ ಮಾಡಿದರು. ಅಷ್ಟೇ ಅಲ್ಲದೆ ತಮ್ಮ ಕ್ಷೇತ್ರಗಳಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿಯ ಬಗ್ಗೆಯೂ ಶಾಸಕರು ಇದೇ ಸಂದರ್ಭದಲ್ಲಿ ಸಿಎಂಗೆ ಮಾಹಿತಿ ನೀಡಿದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಆದ್ಯತೆ ನೀಡಿ. ಜನರ ಸಮಸ್ಯೆಗಳಿಗೆ ಸ್ಪಂದಿಸಿ.



ಯಾವುದೇ ರೀತಿಯಲ್ಲಿ ಅನುದಾನದ ಚಿಂತೆ ಬೇಡ. ಚುನಾವಣಾ ವರ್ಷ ಆಗಿ ರುವುದರಿಂದ ಅನುದಾನ ಬಿಡುಗಡೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಶಾಸಕರಿಗೆ ಭರವಸೆ ನೀಡಿದರು.

**ಸರ್ಕಾರದ ಕೆಲಸ ಕಾರ್ಯ ಜನರಿಗೆ ತಲುಪಿಸಿ**

ಈಗಾಗಲೇ ಚುನಾವಣಾ ಆಯೋಗ ಎಸ್ಐಆರ್ ಪ್ರಕ್ರಿಯೆ ಮುಗಿಸಿದೆ. ಕರಡು ಪಟ್ಟಿ ಬಿಡುಗಡೆ ಮಾಡಿದೆ. ಹೀಗಾಗಿ ಸಾಕಷ್ಟು ಮತದಾರರು ಪಟ್ಟಿಯಲ್ಲಿ ಕಣ್ಮರೆಯಾಗಿದ್ದಾರೆ. ಹೀಗಾಗಿ ಕ್ಷೇತ್ರವಾರು ಮತದಾರರು ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗದಂತೆ ನೋಡಿ ಎಂಬ ಸೂಚನೆಗಳನ್ನು ಶಾಸಕರಿಗೆ ನೀಡಿದ್ದಾರೆ.

ಅಷ್ಟೇ ಅಲ್ಲದೆ ವಿಪಕ್ಷಗಳ ಹೋರಾಟಕ್ಕೆ ತಕ್ಕ ರೀತಿಯಲ್ಲಿ ತಿರುಗೇಟು ನೀಡಬೇಕು. ಸರ್ಕಾರದ ವಿರುದ್ಧ ಜಿಲ್ಲಾ ಮಟ್ಟದಲ್ಲಿ ಹೋರಾಟ ನಡೆಸಿ ಜನಾಭಿಪ್ರಾಯ ರೂಪಿಸಲು ಬಿಜೆಪಿ ಮುಂದಾಗಿದೆ. ಹೀಗಾಗಿ ಅದಕ್ಕೆ ಅವಕಾಶ ನೀಡಬಾರದು. ವಿರೋಧ ಪಕ್ಷಗಳು ಹೋರಾಟ ನಡೆಸಿದರೆ ಅದಕ್ಕೆ ತಕ್ಕ ಉತ್ತರ ಕೊಡಬೇಕು. ಸರ್ಕಾರದ ಕೆಲಸ ಕಾರ್ಯಗಳನ್ನು ಜನರ ಮುಂದೆ ತಲುಪಿಸುವ ಕೆಲಸ ಆಗಬೇಕೆಂಬ ಸೂಚನೆಗಳನ್ನು ನೀಡಿದ್ದಾರೆ.

**ಆಕ್ಷೇಪ ಹೊರಹಾಕಿದ ಶಾಸಕರು**

ಸಭೆಯಲ್ಲಿ ಶಾಸಕರು ತಮ್ಮ ಅಸಮಾಧಾನ, ನೋವು ಕೂಡಾ ಹೊರ ಹಾಕಿದ್ದಾರೆ. ಸಚಿವರು ಸೂಕ್ತ ರೀತಿಯಲ್ಲಿ ಸ್ಪಂದನೆ ಮಾಡುತ್ತಿಲ್ಲ. ಪತ್ರಗಳನ್ನು ಹಿಡಿದು ಅಲೆದಾಡ ಬೇಕಾಗುತ್ತಿದೆ. ಹೀಗಾಗಿ ಹೊಸ ಸಂಪುಟಕ್ಕೆ ಸೂಚನೆಗಳನ್ನು ನೀಡಿ ಎಂಬ ಮನವಿಯನ್ನು ಕೆಲ ಶಾಸಕರು ಮಾಡಿದ್ದಾರೆ.

### ಚುನಾವಣೆಗೆ ಸಜ್ಜಾಗಿ

ಇನ್ನೇನು ಒಂದು ವರ್ಷ ಮುಕ್ತಾಯಗೊಂಡರೆ ಚುನಾವಣಾ ಕಾವು ತೀವ್ರವಾಗುತ್ತದೆ. ಹಾಗಾಗಿ ಈಗಿನಿಂದಲೇ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಿ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಚುನಾವಣೆ ಕಡೆಗೂ ಗಮನ ಹರಿಸಿ. ಗ್ಯಾರಂಟಿ ಯೋಜನೆಗಳ ಬಗ್ಗೆ ಹೆಚ್ಚು ಪ್ರಚಾರ ನೀಡಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶಾಸಕರಿಗೆ ಸೂಚನೆ ನೀಡಿದ್ದಾರೆ.

### ಚುನಾವಣಾ ಆಯಕ್ತರಿಗೆ ಸಿಎಂ ಪತ್ರ

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪತ್ರ ಬರೆದಿದ್ದಾರೆ. ಎಸ್ಐಆರ್ ಪ್ರಕ್ರಿಯೆಯಲ್ಲಿ 1.08 ಕೋಟಿಗೂ ಅಧಿಕ ಮತದಾರರನ್ನು ಎಎಸ್‌ಡಿಡಿಒ ಪಟ್ಟಿಯಲ್ಲಿ ಗುರುತಿಸಿರುವುದು ಹಾಗು ಸುಮಾರು 43 ಲಕ್ಷ ಮತದಾರರಿಗೆ ತಾರ್ಕಿಕ ವ್ಯತ್ಯಾಸಗಳ ಕುರಿತು ನೋಟೀಸ್ ನೀಡಿರುವುದು ಗಂಭೀರ ಆತಂಕಕ್ಕೆ ಕಾರಣ ವಾಗಿದೆ ಎಂದು ತಿಳಿಸಿದ್ದಾರೆ.

## ಪ್ರವಾಸಿ ತಾಣಗಳಲ್ಲಿ ಎಸ್ಒಪಿ ಪಾಲನೆ ಕಡ್ಡಾಯ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಪ್ರವಾಸಿ ತಾಣ ಗಳ ವೀಕ್ಷಣೆಗೆ ಬರುವ ಪ್ರವಾಸಿ ಗರು ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್ಒಪಿ) ಪಾಲಿಸ ಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸೂಚಿಸಿದ್ದಾರೆ.

ಪ್ರತಿನಿತ್ಯ ಹಾಗು ವಾರಾಂತ್ಯ ರಾಜ್ಯ, ದೇಶ ಹಾಗು ವಿದೇಶಗಳಿಂದ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡು ತ್ತಿದ್ದು, ಪ್ರವಾಸಿಗರು ಪ್ರಮಾಣಿತ ಕಾರ್ಯಾಚರಣೆ ವಿಧಾನಗಳನ್ನು ಅನುಸರಿಸಬೇಕು. ಜಿಲ್ಲೆಯಲ್ಲಿ ಪ್ರವಾಸೋದ್ಯಮದ ಬೆಳವಣಿಗೆಯೊಂದಿಗೆ ವಿವಿಧ ರೆಸಾರ್ಟ್, ಹೋಂ ಸ್ಟೇ, ಹೋಟೆಲ್ ಹಾಗು ಇತರ ವಸತಿ ಘಟಕಗಳಲ್ಲಿ ತಂಗುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚು ತ್ತಿದೆ. ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕ ಶಿಸ್ತು, ಸ್ಥಳೀಯ ಸಂಸ್ಕೃತಿ, ಸಂಪ್ರದಾಯ, ಧಾರ್ಮಿಕ ಆಚರಣೆ ಹಾಗು ದೇವಾಲಯಗಳ ಪಾವಿತ್ರ್ಯತೆಗೆ ಧಕ್ಕೆ ಉಂಟುಮಾಡುವ ರೀತಿ ಯಲ್ಲಿ ವರ್ತಿ ಸುವುದು, ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಹಾನಿ, ಎಲ್ಲೆಂದರಲ್ಲಿ ಕಸ ಎಸೆಯು ವುದು, ಮದ್ಯಪಾನ ಮಾಡಿ ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯ ವರ್ತನೆ, ಜೋರಾಗಿ ಸಂಗೀತ ಪ್ರಸಾರ, ಖಾಸಗಿ ವಾಹನಗಳನ್ನು ಸಂಘಟಿತ ರೀತಿಯಲ್ಲಿ ಚಲಾಯಿಸಿ ರೀಲ್ಸ್/ವಿಡಿಯೋ ಚಿತ್ರೀಕರಿಸಿ ಸಾಮಾಜಿಕ ಜಾಲ ತಾಣಗಳಲ್ಲಿ ಪ್ರಸಾರ ಮಾಡುವುದು ಹಾಗು ಸಾರ್ವಜನಿಕ ಶಾಂತಿ, ಸ್ಥಳೀಯರೊಂದಿಗೆ ಸೌಹಾರ್ದ ಯುತ ಸಂಬಂಧ ಹಾಳು ಮಾಡು ತ್ತಿರುವ ಕುರಿತು ದೂರುಗಳು ಬಂದಿವೆ ಎಂದು ಹೇಳಿದ್ದಾರೆ.

ಸಕಲೇಶಪುರ ತಾಲ್ಲೂಕಿನಲ್ಲಿ ಮಳೆಗಾಲದ ಸಂದರ್ಭದಲ್ಲಿ ಪ್ರಕೃತಿ ಸೌಂದರ್ಯ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ಖಾಸಗಿ ವಾಹನಗಳ ಆಫ್‌ರೋಡ್, ಅತಿವೇಗದ ಚಾಲನೆ, ರಸ್ತೆ ಬದಿಯಲ್ಲಿ ಅನಿಯಂತ್ರಿತ ವಾಹನ ನಿಲುಗಡೆ, ಜೋರಾಗಿ ಹಾರ್ನ್ ಹಾಗು ಸಂಗೀತ ಬಳಸುವುದು ಮುಂತಾದ ಚಟುವಟಿಕೆಗಳಿಂದ ಸ್ಥಳೀಯ ಸಾರ್ವಜನಿಕರಿಗೆ ಹಾಗು ಇತರ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿದೆ. ಮಳೆಗಾಲದಲ್ಲಿ ಅಪಾಯ ಸಂಭವಿಸುವ ಸಾಧ್ಯತೆಯಿದ್ದು ಮುಂಜಾಗ್ರತೆ ವಹಿಸಬೇಕು. ಇಂತಹ ಘಟನೆಗಳು ಜಿಲ್ಲೆಯ ಪ್ರವಾ ಸೋದ್ಯಮ ಉತ್ತೇಜನಕ್ಕೆ ಧಕ್ಕೆ ಉಂಟುಮಾಡು ವುದಲ್ಲದೆ, ಸಾರ್ವಜನಿಕ ಶಾಂತಿ, ಪರಿಸರ ಸಂರ ಕ್ಷಣೆ ಹಾಗು ಸ್ಥಳೀಯರ ಜೀವನ ಕ್ರಮಕ್ಕೂ ಅಡಚಣೆ ಉಂಟುಮಾಡುವ ಸಾಧ್ಯತೆ ಇರು ತ್ತದೆ. ಆದ್ದರಿಂದ ಜಿಲ್ಲೆಯಲ್ಲಿರುವ ಎಲ್ಲಾ ರೆಸಾರ್ಟ್, ಹೋಂ ಸ್ಟೇ, ಹೋಟೆಲ್‌ಗಳ ಮೂಲಕ ಪ್ರವಾಸಿಗರಿಗೆ ಜವಾಬ್ದಾರಿಯುತ ಪ್ರವಾಸೋದ್ಯಮದ ಬಗ್ಗೆ ಕಡ್ಡಾಯವಾಗಿ ಅರಿವು ಮೂಡಿಸಿ, ಪ್ರಮಾ ಣಿತ ಕಾರ್ಯಾಚರಣೆ ವಿಧಾನ ಅನುಸರಿಸಬೇಕು. ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆ ನೀಡಿದ್ದಾರೆ.

## ಪರಿಷ್ಕೃತ ಕನಿಷ್ಠ ವೇತನ ಜಾರಿಗೊಳಿಸಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ಪರಿಷ್ಕೃತ ಕನಿಷ್ಠ ವೇತನ ಹಿಂಪಡೆಯುವ ಸರ್ಕಾರದ ನೀತಿ ಖಂಡಿಸಿ ಆರೋಗ್ಯ ಇಲಾಖೆಯ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘದ ಸಾವಿರಾರು ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ರಾಜ್ಯಮಟ್ಟದ ಪ್ರತಿಭಟನೆ ನಡೆಸಿದರು.

ನಗರದ ಮಹಾವೀರ ವೃತ್ತದಿಂದ ಹೊರಟ ಪ್ರತಿಭಟನೆ ಮೆರವಣಿಗೆ ಹೇಮಾವತಿ ವೃತ್ತ, ಎನ್.ಆರ್. ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಆಗಮಿಸಿತು. ಈ ವೇಳೆ ಸರ್ಕಾರ ವಿರುದ್ಧ ಘೋಷಣೆ ಕೂಗಿ, ಪರಿಷ್ಕೃತ ಕನಿಷ್ಠ ವೇತನ ಜಾರಿಗೆ ಆಗ್ರಹಿಸಿದರು.

ಕಾರ್ಮಿಕ ಇಲಾಖೆ ಸೂಚನೆಯಂತೆ ರಾಜ್ಯ ಸರ್ಕಾರದ ಅಧೀನ ಕಾರ್ಯದರ್ಶಿ ಅವರು ಮೇ. 22 ರಂದು ಕಾರ್ಮಿಕರ ಬಹುದಿನಗಳ ಬೇಡಿಕೆಯಾಗಿದ್ದ ಕನಿಷ್ಠ ವೇತನವನ್ನು ಪರಿಷ್ಕರಣೆ ಮಾಡಿ ಆದೇಶ ಹೊರಡಿಸಿದ್ದರು. ಆ ಪ್ರಕಾರ ಕೆಲ ಜಿಲ್ಲೆಗಳ



ಇಲಾಖೆ ಮುಖ್ಯಸ್ಥರಿಂದ ಹೊಸ ವೇತನ ಅನುಬಂಧ ಪಡೆದು 2 ತಿಂಗಳ ವೇತನವನ್ನು ಈಗಾಗಲೇ ಏಜೆನ್ಸಿಯವರು ನೌಕರರಿಗೆ ಪಾವತಿ ಮಾಡಿದ್ದರು. ಆದರೆ, ಆರ್ಥಿಕ ಇಲಾಖೆಯು ಜುಲೈ 15 ರಂದು ಹೊರಡಿಸಿದ್ದ ಅಧಿಕೃತ ಜ್ಞಾಪಕನದಲ್ಲಿ ನೂತನ ಪರಿಷ್ಕೃತ ವೇತನವನ್ನು ಹಿಂಪಡೆಯುವುದಾಗಿ ತಿಳಿಸಿದ್ದಾರೆಂದು ಆರೋಪಿಸಿದರು.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಅಕ್ಷಯ್ ಡಿ.ಎಂ.ಗೌಡ ಅವರು ಮಾತನಾಡಿ, ಹೊರಗುತ್ತಿಗೆ ನೌಕರರ ಹಲವು ವರ್ಷಗಳ ಬೇಡಿಕೆಗೆ ಸ್ಪಂದಿಸಿ ಕಾರ್ಮಿಕ ಇಲಾಖೆ ಕನಿಷ್ಠ ವೇತನ ಪರಿಷ್ಕರಿಸಿತ್ತು. ಆದರೆ, ಆರ್ಥಿಕ ಇಲಾಖೆ ಹೊರಡಿಸಿರುವ ಅಧಿಕೃತ ಜ್ಞಾಪನದಲ್ಲಿ ಪರಿಷ್ಕೃತ ಕನಿಷ್ಠ ವೇತನ ಹಿಂಪಡೆಯುವ ನಿರ್ಧಾರ ಕೈಗೊಂಡಿರುವುದು ಸಾವಿರಾರು ಹೊರಗುತ್ತಿಗೆ ನೌಕರರ ಬದುಕಿಗೆ ಹೊಡೆತ ನೀಡಿದಂತಾಗಿದೆ. ಒಂದು ಕಡೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ಮತ್ತೊಂದೆಡೆ ಕಡಿಮೆ ವೇತನದಲ್ಲಿ ಕುಟುಂಬ ನಿರ್ವಹಣೆ ಮಾಡಬೇಕಾದ ಅನಿವಾರ್ಯತೆ ಇದ್ದು, ಸರ್ಕಾರದ ಈ ಕ್ರಮ ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

» ನಾಲ್ಕನೇ ಪುಟದಲ್ಲಿ

## ಹೊಳೆನರಸೀಪುರ-ಅರಕಲಗೂಡು ಮೂಲಕ ಕೊಡಗಿಗೆ ಸಂಪರ್ಕ: ಹೊಸ ಮಾರ್ಗ ಪ್ರಸ್ತಾಪ

# ಅರಕಲಗೂಡಿಗೆ ರೈಲ್ವೆ ಮಾರ್ಗ: ಕೇಂದ್ರದಿಂದ ಸಾಧ್ಯತಾ ಅಧ್ಯಯನ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಎಂಟು ತಾಲ್ಲೂಕುಗಳ ಪೈಕಿ ಆರು ತಾಲ್ಲೂಕುಗಳು ಈಗಾಗಲೇ ರೈಲು ಸಂಪರ್ಕ ಹೊಂದಿವೆ. ಬೇಲೂರಿಗೂ ರೈಲು ಸಂಪರ್ಕ ಕಲ್ಪಿಸುವ ಕಾಮಗಾರಿ ಅಂತಿಮ ಹಂತದಲ್ಲಿದೆ. ಈ ಬೆನ್ನಲ್ಲೇ ರೈಲ್ವೆ ಸಂಪರ್ಕದಿಂದ ವಂಚಿತವಾಗಿರುವ ಅರಕಲಗೂಡು ತಾಲ್ಲೂಕಿಗೂ ರೈಲು ಹಾದಿ ಕಲ್ಪಿಸುವ ಬಹು ಕಾಲದ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿದೆ.

ಅರಕಲಗೂಡು ಮೂಲಕ ಕೊಡಗು ಜಿಲ್ಲೆಯನ್ನು ಸಂಪರ್ಕಿಸುವ ಹೊಸ ರೈಲು ಮಾರ್ಗ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಾಧ್ಯತಾ ಅಧ್ಯಯನ ನಡೆಸಿರುವುದು ಈ ಭಾಗದ ಜನರಲ್ಲಿ ಹೊಸ ನಿರೀಕ್ಷೆ ಮೂಡಿಸಿದೆ. ಶ್ರವಣಬೆಳಗೊಳ-ಹೊಳೆನರಸೀಪುರ-ಅರಕಲಗೂಡು-ಕೊಣನೂರು- ಕುಶಾಲನಗರ- ಮಡಿಕೇರಿ ನಡುವೆ ಸುಮಾರು 117 ಕಿ.ಮೀ ಉದ್ದದ ಹೊಸ ರೈಲು ಮಾರ್ಗ ನಿರ್ಮಿಸುವ ಸಾಧ್ಯತೆ ಯನ್ನು ಪರಿಶೀಲಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಕುರಿತು ಸಂಸದ ಶ್ರೇಯಸ್ ಪಟೇಲ್ ಅವರು ಸಂಸತ್ ಅಧಿವೇಶನದಲ್ಲಿ ಅತಾರಾಂಕಿತ ಪ್ರಶ್ನೆ ಕೇಳಿದ್ದು, ಕೇಂದ್ರ ಸರ್ಕಾರದಿಂದ ಅಧಿಕೃತ ಲಿಖಿತ ಉತ್ತರ ಪಡೆದಿದ್ದಾರೆ. ಅರಕಲಗೂಡಿಗೆ ರೈಲು ಸಂಪರ್ಕ ಕಲ್ಪಿಸುವ ಅಗತ್ಯವನ್ನು ಒತ್ತಿ ಹೇಳಿರುವ ಅವರು,

» ನಾಲ್ಕನೇ ಪುಟದಲ್ಲಿ



### ಬೇಲೂರು ರೈಲು ಕಾಮಗಾರಿ ಅಂತಿಮ ಹಂತ

ಅರಕಲಗೂಡಿನ ರೈಲು ಸಂಪರ್ಕದ ಚರ್ಚೆಯ ನಡುವೆಯೇ ಬೇಲೂರಿಗೆ ರೈಲು ಸಂಪರ್ಕ ಕಲ್ಪಿಸುವ ಕಾಮಗಾರಿಯೂ ವೇಗ ಪಡೆದುಕೊಂಡಿದೆ. ಚಿಕ್ಕಮಗಳೂರಿನಿಂದ ಹಾಲದಹಳ್ಳಿ ಮಾರ್ಗವಾಗಿ ಬೇಲೂರಿಗೆ ಸಂಪರ್ಕ ಕಲ್ಪಿಸುವ ಸುಮಾರು 22 ಕಿ.ಮೀ ಉದ್ದದ ರೈಲು ಮಾರ್ಗ ನಿರ್ಮಾಣ ಕಾಮಗಾರಿ ಬಹುತೇಕ ಅಂತಿಮ ಹಂತ ತಲುಪಿದೆ. ಬೇಲೂರಿನ ಮೂಡಿಗೆರೆ ರಸ್ತೆಯ ಜೆ.ಪಿ.ನಗರ ಸಮೀಪದ ಹೇಮಾವತಿ ನಗರದಲ್ಲಿ ನಿರ್ಮಿಸಲಾ ಗುತ್ತಿರುವ ರೈಲು ನಿಲ್ದಾಣದ ಕಾಮಗಾರಿಯೂ ಚುರುಕುಗೊಂಡಿದೆ. ಪ್ರಯಾಣಿಕರ ನಿರೀಕ್ಷಣಾ ಕೊಠಡಿ, ವಿಶೇಷ ಅತಿಥಿಗಳ ನಿರೀಕ್ಷಣಾ ಸ್ಥಳ, ಕೆಳಸೇತುವೆ, ಮೇಲ್ಭಾಗದ ನೀರಿನ ಟ್ಯಾಂಕ್ ಸೇರಿ ವಿವಿಧ ಮೂಲ ಸೌಕರ್ಯಗಳನ್ನು ಇಲ್ಲಿ ಕಲ್ಪಿಸಲಾಗುತ್ತಿದೆ.

> ಜಿಲ್ಲೆಯ 8 ತಾಲ್ಲೂಕುಗಳ ಪೈಕಿ ಅರಕಲಗೂಡು ಮಾತ್ರ ರೈಲ್ವೆ ಸೇವೆಯಿಂದ ವಂಚಿತವಾಗಿದೆ. ಅರಕಲ ಗೂಡಿಗೂ ಹೊಸ ರೈಲು ಮಾರ್ಗ ನಿರ್ಮಿಸುವಂತೆ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ. ಸಂಸತ್ ಅಧಿವೇಶನದಲ್ಲಿಯೂ ಪ್ರಶ್ನೆ ಕೇಳಿದ್ದು, ಸಾಧ್ಯತಾ ಅಧ್ಯಯನ ನಡೆಸಲಾಗಿದೆ ಎಂಬ ಅಧಿಕೃತ ಲಿಖಿತ ಉತ್ತರ ದೊರೆತಿದೆ. ಮುಂದಿನ ಹಂತಗಳಲ್ಲಿ ಯೋಜನೆಗೆ ಅಗತ್ಯವಾದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದು.
> -ಶ್ರೇಯಸ್ ಪಟೇಲ್, ಸಂಸದ



## ನಾಳೆ ಚ.ರಾ.ಪಟ್ಟಣದಲ್ಲಿ ಯುವ ಸೌರಭ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆ.27ರ ಬೆಳಿಗ್ಗೆ 10.30ಕ್ಕೆ ಯುವ ಸೌರಭ ಕಾರ್ಯಕ್ರಮ ಆಯೋಜಿಸಲಾಗಿದೆ.

ಆದಿಚುಂಚನಗಿರಿ ಹಾಸನ-ಕೊಡಗು ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನಿಧ್ಯ ವಹಿಸುವರು. ಶಾಸಕ ಸಿ.ಎನ್.ಬಾಲಕೃಷ್ಣ, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ನಿರ್ಮಲಾ ಮಠಪತಿ, ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಮತ್ತಿತರರು ಭಾಗವಹಿಸುವರು.

ಕಂಸಾಳೆ, ರಂಗ ಕುಣಿತ, ಭರತನಾಟ್ಯ, ಸಮೂಹ ಗಾಯನ, ಚಂಡೆ ವಾದ್ಯ, ಡೊಳ್ಳು ಕುಣಿತ ಮತ್ತು ಕಿರು ನಾಟಕ ಪ್ರದರ್ಶನ ಇರಲಿದೆ. ಹಾಸನ, ಅರಕಲಗೂಡು, ಚನ್ನರಾಯ ಪಟ್ಟಣ, ಅರಸೀಕೆರೆ, ಉಡುಪಿಯ ಕಲಾತಂಡಗಳು ಭಾಗವಹಿಸಲಿವೆ. ಜೊತೆಗೆ ಪಟ್ಟಣದ ಆದಿಚುಂಚನ ಗಿರಿ ಪ್ರಥಮ ದರ್ಜೆ ಕಾಲೇಜು ಹಾಗು ಬಿಜಿಎಸ್ ಪಿಯು ಕಾಲೇಜು ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕ ತಾರಾನಾಥ್ ಅವರು ತಿಳಿಸಿದ್ದಾರೆ.

## ನಾಳೆ ವಿಶ್ವ ಜನಸಂಖ್ಯೆ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ನಗರದ ಎಂ.ಜಿ.ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ವತಿಯಿಂದ ಆ.27ರ ಗುರುವಾರ ಬೆಳಿಗ್ಗೆ 10.30ಕ್ಕೆ ವಿಶ್ವ ಜನಸಂಖ್ಯಾ ದಿನಾಚರಣೆ ಹಾಗು ಆಧ್ಯಾತ್ಮಿಕ ಚಿಂತನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಂಶುಪಾಲ ಎಂ.ಬಾಲಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಚ್.ಪಿ.ಮೋಹನ್ ಸೇರಿ ಇತರರು ಪಾಲ್ಗೊಳ್ಳಲಿದ್ದಾರೆ.

## ಕ್ಯಾತನಹಳ್ಳಿ ಏತ ನೀರಾವರಿ: ನೀರು ಹರಿಸಲು ನಿರ್ಲಕ್ಷ್ಯ

• ಪ್ರಜೋದಯ ವರದಿ

**ಹಾಸನ:** ಸಾಲಗಾಮೆ ಹೋಬಳಿ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯ ಎರಡು ಹಂತದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದರೂ 2 ಕೋಟಿ ರೂ. ವಿದ್ಯುತ್ ಬಿಲ್ ಕಟ್ಟಿಲ್ಲವೆಂದು ನೆಪಹೇಳಿಕೊಂಡು ನೀರು ಹರಿಸುತ್ತಿಲ್ಲ ಎಂದು ಕರ್ನಾಟಕ ರಾಜ್ಯ ರೈತಸಂಘದ ಹಾಗು ಹಸಿರು ಸೇನೆ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಅವರು ದೂರಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2001ರಲ್ಲಿ ನೀರಾವರಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಯಿತು. 2007-08 ಯೋಜನೆಗೆ ತಾಂತ್ರಿಕ ಅನುಮೋದನೆ ನೀಡಲಾಯಿತು. 30 ಕೋಟಿ ರೂ. ವೆಚ್ಚದ ಯೋಜನೆ 2013-15ರಲ್ಲಿ ಮುಗಿದಿದ್ದರೂ ನೀರು ಹರಿಸದೇ ರೈತ ವಿರೋಧಿ ನೀತಿ ಹರಿಸಲಾಗುತ್ತಿದೆ ಎಂದು ದೂರಿದರು.





ಒಟ್ಟು ಮೂರು ಹಂತದ ಯೋಜನೆಯಡಿ ಒಟ್ಟು 58 ಹಳ್ಳಿಗಳ ಕೆರೆ ತುಂಬಿಸುವುದರ ಜೊತೆಗೆ ಸುಮಾರು 5,685 ಎಕರೆ ಅರೆ ಖುಷ್ಕಿ ಪ್ರದೇಶಕ್ಕೆ ನೀರುಳಿಸುವ ಭರವಸೆ ನೀಡಲಾಗಿತ್ತು. ಮೊದಲ ಹಂತದಲ್ಲಿ 1,950 ಎಕರೆ ಅರೆ ಖುಷ್ಕಿ ಜಮೀನಿಗೆ, 2ನೇ ಹಂತದಲ್ಲಿ 3,735 ಎಕರೆ ಪ್ರದೇಶಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ. ಯೋಜನೆ ಹಂತ-2 ರ

» ನಾಲ್ಕನೇ ಪುಟದಲ್ಲಿ

## ಕಾಣೆಯಾಗಿದ್ದ ಯುವಕ ಶವವಾಗಿ ಪತ್ತೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಕಾಣೆಯಾಗಿದ್ದ ಯುವಕನ ಶವ ಹೇಮಾವತಿ ನಾಲೆಯಲ್ಲಿ ಪತ್ತೆಯಾ ಗಿರುವ ಘಟನೆ ತಾಲ್ಲೂಕಿನ ಆಲಗೊಂಡನಹಳ್ಳಿ ಗ್ರಾಮದಲ್ಲಿ ನಡೆದಿದೆ. ದರ್ಶನ್ (24) ಸಾವನ್ನಪ್ಪಿರುವ ಯುವಕ.

ಚನ್ನರಾಯಪಟ್ಟಣದ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ದರ್ಶನ್ ಮೂರ್ಛೆ ರೋಗದಿಂದ ಬಳಲುತ್ತಿದ್ದರು. ಆ.23 ರಂದು ಬೆಳಿಗ್ಗೆ ಕೆಲಸಕ್ಕೆ ಹೊರಟ್ಟಿದ್ದ ದರ್ಶನ್ ಆನಂತರ ದಿಢೀರ್ ಕಾಣೆಯಾಗಿದ್ದ. ಮಗನಿಗಾಗಿ ಪೋಷಕರು ಹಲವು ಕಡೆಗಳಲ್ಲಿ ಹುಡುಕಾಟ ನಡೆಸಿ ದ್ದರು. ನಂತರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು.

ಸೋಮವಾರ ರಾತ್ರಿ ಹೇಮಾವತಿ ನಾಲೆಯಲ್ಲಿ ಮೃತದೇಹವೊಂದು ತೇಲುತ್ತಿದ್ದು ಸ್ಥಳೀಯರು ಮೃತದೇಹವನ್ನು ಹೊರಗೆ ತೆಗೆದು ನೋಡಿದಾಗ ದರ್ಶನ್ ಎಂದು ಗೊತ್ತಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಟೊಮ್ಯಾಟೊ ಬೆಲೆ ಕುಸಿತ: ಬೆಳೆಗಾರರಿಗೆ ಆತಂಕ

• ಪ್ರಜೋದಯ ವರದಿ

**ಹಾಸನ:** ಕೆಲ ದಿನಗಳ ಹಿಂದೆ ಕೆ.ಜಿ.ಗೆ 50ರ ಆಸುಪಾಸಿನಲ್ಲಿದ್ದ ಕೆಂಪು ಸುಂದರಿ ಎಂದು ಕರೆಯಲಾಗುವ ಟೊಮ್ಯಾಟೊ ಬೆಲೆ ಇದೀಗ ಗಣನೀಯವಾಗಿ ಇಳಿಕೆಯಾಗಿದ್ದು, ಗ್ರಾಹಕರಿಗೆ ತುಸು ನೆಮ್ಮದಿ ತಂದಿದ್ದರೆ ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಮಂಗಳವಾರ ಪ್ರತಿ ಚೀಲ ಟೊಮ್ಯಾಟೊ ಕೇವಲ 40 ರೂ. ಗೆ ಬಿಕರಿಯಾಯಿತು. ಗುಣಮಟ್ಟದ ಟೊಮ್ಯಾಟೊ 50 ರಿಂದ 60 ರೂ. ಆಸುಪಾಸಿನಲ್ಲಿ ಸಿಕ್ಕಿತು. ಪ್ರತಿ ಚೀಲಕ್ಕೆ 15 ಕೆ.ಜಿ. ತೂಕ ಹೊಂದಿದ್ದು ಕೆ.ಜಿ.ಗೆ ಕೇವಲ 4 ರೂ.ನಂತೆ ಲಭ್ಯವಾಯಿತು. ಮಾರುಕಟ್ಟೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಟೊಮ್ಯಾಟೊ ಆವಕವಾಗುತ್ತಿದೆ. ಮಾರುಕಟ್ಟೆಗೆ ಸ್ಥಳೀಯ ಹಾಗು ಸುತ್ತಮುತ್ತಲಿನ ಪ್ರದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಟೊಮ್ಯಾಟೊ ಬರುತ್ತಿರುವುದು ಕಂಡು ಬರುತ್ತಿದೆ. ಒಂದೇ ಅವಧಿಯಲ್ಲಿ ಹಲವು ಪ್ರದೇಶಗಳಲ್ಲಿ ಫಸಲು ಮಾರುಕಟ್ಟೆಗೆ ಬಂದಿರುವುದರಿಂದ ಪೂರೈಕೆ ಹೆಚ್ಚಾಗಿ ಬೇಡಿಕೆ ಗಿಂತ ಸರಕು ಪ್ರಮಾಣ ಹೆಚ್ಚಾಗಿದೆ. ಪರಿಣಾಮವಾಗಿ ಸಗಟು



ದರದ ಮೇಲೂ ಒತ್ತಡ ಉಂಟಾಗಿದೆ.

ಅರಸೀಕೆರೆ ತಾಲ್ಲೂಕಿನ ಗಂಡಸಿ, ಜಾವಗಲ್, ಬಾಣಾವರ ಹಾಗು ಹಾಸನ ಸುತ್ತಲಿನ ಗ್ರಾಮಗಳಿಂದ ಟೊಮ್ಯಾಟೊ ಹೆಚ್ಚಾಗಿ ಮಾರುಕಟ್ಟೆಗೆ ಬರುತ್ತಿದೆ. ಉತ್ತಮ ಗುಣಮಟ್ಟದ ಟೊಮ್ಯಾಟೊಗೆ ತುಸು ಹೆಚ್ಚಿನ ದರ ಸಿಗುತ್ತಿದ್ದರೆ, ಸಣ್ಣ ಗಾತ್ರದ ಅಥವಾ ಗುಣಮಟ್ಟ ಕಡಿಮೆ ಇರುವ ಟೊಮ್ಯಾಟೊಗೆ ಕಡಿಮೆ ದರ ಸಿಗುತ್ತಿದೆ.

ಪ್ರಸ್ತುತ ಬೆಲೆ ಕುಸಿತದಿಂದ ಗ್ರಾಹಕರಿಗೆ ಅನುಕೂಲವಾಗಿದ್ದರೂ, ಉತ್ಪಾದನಾ ವೆಚ್ಚ ಹೆಚ್ಚಿರುವ ಸಂದರ್ಭದಲ್ಲಿ ರೈತರಿಗೆ ನಿರೀಕ್ಷಿತ ಆದಾಯ ಸಿಗದ ಪರಿಸ್ಥಿತಿ ಎದುರಾಗಿದೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆಗೆ ಬರುವ ಪ್ರಮಾಣ, ಮಳೆ ಹಾಗು ಬೇಡಿಕೆಯನ್ನು ಆಧರಿಸಿ ದರದಲ್ಲಿ ಮತ್ತಷ್ಟು ಏರಿಳಿತವಾಗುವ ಸಾಧ್ಯತೆಯಿದೆ.

### ಇತರೆ ತರಕಾರಿ ಬೆಲೆ ಕುಸಿತ

ವರಮಹಾಲಕ್ಷ್ಮಿ ಹಬ್ಬದ ಆಸುಪಾಸಿನ ದಿನಗಳಲ್ಲಿ ಎಲ್ಲಾ ತರಕಾರಿ ಬೆಲೆ ಹೆಚ್ಚಿತ್ತು. ಆದರೆ ಈಗ ಸಾಕಷ್ಟು ಇಳಿಕೆಯಾಗಿದೆ. ಹಿರೇಕಾಯಿ, ಮೂಲಂಗಿ, ಗೆಡ್ಡೆ ಕೋಸು, ಬೀನ್ಸ್ ಪ್ರತಿ ಕೆ.ಜಿ.ಗೆ 20 ರೂ. ನಂತೆ ಮಾರಾಟವಾ ಯಿತು. ಹಸಿ ಮೆಣಸಿನಕಾಯಿ ಕೆ.ಜಿ.ಗೆ 40 ರಿಂದ 50 ರೂ., ಸವತೆಕಾಯಿ 30 ರೂ., ಕ್ಯಾರೆಟ್ 40 ರೂ. ನಂತೆ ಲಭ್ಯವಾಯಿತು.

## ಎಚ್ಚೆತ್ತುಕೊಳ್ಳದ ಸಂಚಾರ ಠಾಣೆ ಪೊಲೀಸರು | ವಾಹನ ಸಂಚಾರಕ್ಕೆ ತೊಂದರೆ

# ಹಾಸನದ ಮುಖ್ಯ ರಸ್ತೆಗಳೆಲ್ಲ ಕಾರು ಪಾರ್ಕಿಂಗ್ ತಾಣ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಪಾದಚಾರಿಗಳ ಸಂಚಾರಕ್ಕೆ ಅನುಕೂಲವಾಗಲಿ, ರಸ್ತೆ ಅಪಘಾತ ಕಡಿಮೆಯಾಗಲಿ ಎಂಬ ಸದುದ್ದೇಶದಿಂದ ಮಹಾನಗರ ಪಾಲಿಕೆ ನಗರದಲ್ಲಿ ರಸ್ತೆಬದಿ ಅಂಗಡಿಗಳ ತೆರವುಗೊಳಿ ಸಿದ್ದು ಖಾಲಿ ಜಾಗದಲ್ಲೀಗ ಕಾರುಗಳು ನಿಲುಗಡೆಯಾಗುತ್ತಿದ್ದು ಮತ್ತೊಂದು ಸಮಸ್ಯೆ ಸೃಷ್ಟಿಯಾಗಿದೆ.

ನಗರದ ಬಹುತೇಕ ರಸ್ತೆಗಳು ಕಳೆದ ಹಲವು ದಿನಗಳಿಂದ ಪಾರ್ಕಿಂಗ್ ತಾಣಗಳಾಗಿ ಮಾರ್ಪಟ್ಟಿವೆ. ಹಿಮ್ಸ್‌ಗೆ ಸಂಪರ್ಕಿಸುವ ಜಿಲ್ಲಾಧಿಕಾರಿ ಕಚೇರಿ ಪಕ್ಕದ ರಸ್ತೆ, ಬಿ.ಎಂ.ರಸ್ತೆ, ಎಂ.ಜಿ.ರಸ್ತೆ, ಶಂಕರಮಠ ರಸ್ತೆ, ಆರ್.ಸಿ.ರಸ್ತೆ, ಸಾಲಗಾಮೆ ರಸ್ತೆ ಸೇರಿ ನಗರದ ಬಹುತೇಕ ರಸ್ತೆಗಳಲ್ಲಿ ಕಾರು, ಬೈಕ್‌ಗಳದ್ದೇ ಕಾರುಬಾರು ಎನ್ನುವಂತಾಗಿದೆ.

ಸುಪ್ರೀಂ ಕೋರ್ಟ್ ನಿರ್ದೇಶನ ಹಿನ್ನಲೆಯಲ್ಲಿ ಮಹಾನಗರ ಪಾಲಿಕೆ ಹಾಗು ಸ್ಥಳೀಯ ಪೊಲೀಸರು ಬೀದಿ ಬದಿ ಅಂಗಡಿಗಳನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ರಸ್ತೆ ವಿಸ್ತಾರವಾಯಿತೆಂದು ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟಿರುವ ನಡುವೆಯೇ ಮತ್ತೊಂದು ಸಮಸ್ಯೆ ಹುಟ್ಟಿಕೊಂಡಿದೆ. ರಸ್ತೆಯುದ್ದಕ್ಕೂ ಕಾರುಗಳು ನಿಲುಗಡೆಯಾಗುತ್ತಿವೆ. ಬೆಳಿಗ್ಗೆಯಿಂದ ಸಂಜೆ ವರೆಗೆ ವಾಹನ ದಟ್ಟಣೆ ಇರುವುದರಿಂದ ನಗರದಲ್ಲಿ ಸಂಚಾರ ವ್ಯವಸ್ಥೆ ತೀರಾ ಹದಗೆಟ್ಟಿದೆ. ಹೀಗಾಗಿ ಶಾಲಾ ಕಾಲೇಜು ಮಕ್ಕಳು, ಬೈಕ್ ಸವಾರರು ಕಿರಿಕಿರಿ ಅನುಭವಿಸುತ್ತಿದ್ದಾರೆ. ರಸ್ತೆ ಬದಿ ಒಂದು ಕಾರು ನಿಂತರೆ ಅದರ ಹಿಂದೆ ವಾಹನಗಳ ಸಂಖ್ಯೆ ಸಾಲುಗಟ್ಟಿ ನಿಂತಿರುತ್ತವೆ.

**ಆ್ಯಂಬುಲೆನ್ಸ್ ಸಂಚಾರಕ್ಕೂ ಅಡ್ಡಿ**

ಹಿಮ್ಸ್‌ಗೆ ಹೆಚ್ಚಾಗಿ ಆ್ಯಂಬುಲೆನ್ಸ್‌ಗಳು ಬರುತ್ತವೆ. ಆದರೆ ರಸ್ತೆ ಯಾವಗಲೂ ಜಾಂ ಆಗಿರುವುದರಿಂದ ಸಾವು ಬದುಕಿನ ನಡುವೆ ಹೋರಾಡುವ ರೋಗಿಗಳನ್ನು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ತಲುಪಿಸಲು ಸಾಧ್ಯವಾಗುತ್ತಿಲ್ಲ. ಜಿಲ್ಲಾಧಿಕಾರಿ ಕಚೇರಿ ಸಮೀಪದ ರಸ್ತೆ ಯಾವಾಗಲೂ ವಾಹನಗಳಿಂದ ತುಂಬಿರುತ್ತದೆ. ಮೊದಲು ಅಲ್ಲಿ ಕ್ಯಾಂಟೀನ್‌ಗಳಿದ್ದವು. ಮಹಾನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದ್ದರಿಂದ ರಸ್ತೆಪೂರ್ತಿ ಕಾರು ಪಾರ್ಕಿಂಗ್ ತಾಣವಾಗಿ ಮಾರ್ಪಟ್ಟಿದೆ. ಬಹುತೇಕ ಖಾಸಗಿ ನರ್ಸಿಂಗ್ ಹೋಂಗಳು ಅದೇ ರಸ್ತೆಯಲ್ಲಿರು ವುದರಿಂದ ವೈದ್ಯರು, ಅಧಿಕಾರಿಗಳು ರಸ್ತೆಯಲ್ಲೇ ವಾಹನ ನಿಲ್ಲಿಸಿ ಕೆಲಸಕ್ಕೆ ಹೋಗುತ್ತಿದ್ದಾರೆ. ಇನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ ಸಮೀಪ ಆಟೋ ನಿಲ್ದಾಣವಿದ್ದು ಅದನ್ನೂ ಕಾರು ಚಾಲಕರು ಜಪ್ತಿ ಮಾಡಿಕೊಂಡಂತೆ ಮಾಡಿದ್ದಾರೆ. ಬೆಳಿಗ್ಗೆ ಆಟೋ ಚಾಲಕರು ಬರುವ ಮೊದಲೇ ಕಾರು ನಿಲ್ಲಿಸಿ ಹೋಗುತ್ತಿರುವುದರಿಂದ ಆಟೋ ನಿಲ್ಲಿಸಲು ಸ್ಥಳಾವಕಾಶ ಇಲ್ಲದಂತಾಗಿದೆ ಎಂದು ಆಟೋ ಚಾಲಕರೊಬ್ಬರು ಅಳಲು ತೋಡಿಕೊಂಡರು.

ಪ್ರತಿ ಗುರುವಾರ ಬಂತೆಂದರೆ ಎಂ.ಜಿ.ರಸ್ತೆಯ ರಾಘವೇಂದ್ರ ಸ್ವಾಮಿ

» ನಾಲ್ಕನೇ ಪುಟದಲ್ಲಿ



> ರಸ್ತೆಯ ಎಲ್ಲೆಂದರಲ್ಲಿ ಕಾರು ಪಾರ್ಕ್ ಮಾಡುತ್ತಿರುವ ಕುರಿತು ದೂರುಗಳು ಕೇಳಿಬಂದಿವೆ. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ವಹಿಸುವಂತೆ ಸಂಚಾರ ಠಾಣೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.
> -ಶುಭನ್ವಿತಾ, ಎಸ್‌ಪಿ

### ನಗರದ ಸೌಂದರ್ಯಕ್ಕೆ ಧಕ್ಕೆ

ಅಡ್ಡಾದಿಡ್ಡಿ ವಾಹನಗಳ ನಿಲುಗಡೆ, ಬೈಕ್ ವೀಲ್ಡಿಂಗ್, ಗುಂಡಿಬಿದ್ದ ರಸ್ತೆಗಳು ನಗರದ ಸೌಂದರ್ಯಕ್ಕೆ ಧಕ್ಕೆ ತರುತ್ತಿವೆ. ಆರ್.ಸಿ.ರಸ್ತೆಯ ಚರ್ಚ್ ಬಳಿ ಚರಂಡಿ ದುರಸ್ತಿ ಹಿನ್ನಲೆಯಲ್ಲಿ ಗುಂಡಿ ಅಗೆದು ತಿಂಗಳು ಕಳೆದರೂ ಮುಚ್ಚುವ ಕೆಲಸವಾಗಿಲ್ಲ. ಸರ್ಕಾರಿ ಆಸ್ಪತ್ರೆ, ಸರ್ಕಾರಿ ಕಚೇರಿಗಳಿಗೆ ಹೋಗುವ ಸಾರ್ವಜನಿಕರು ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ. ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂಬ ಒತ್ತಾಯ ಸಾರ್ವಜನಿಕರದ್ದಾಗಿದೆ.

# ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು?

**ಕಳೆದ ಎರಡು ಮೂರು ದಿನದಿಂದ ಮಹಾರಾಷ್ಟ್ರದಲ್ಲಿ ಹುಡುಗನೊಬ್ಬ ಐಫೋನ್ ಕೊಡಿಸಲಿಲ್ಲ ಎನ್ನುವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡದ್ದು, ಅವನನ್ನು ಉಳಿಸಿಕೊಳ್ಳುವ ಭರದಲ್ಲಿ ಆತನ ಅಪ್ಪನೂ ಬೆಟ್ಟದಿಂದ ಬಿದ್ದದ್ದು ಅದನ್ನು ಕಂಡು ಆತನ ತಾಯಿಯೂ ಕ್ಷಣ ಮಾತ್ರವೂ ಯೋಚಿಸದೆ ಬೆಟ್ಟದಿಂದ ಹಾರಿ ಜೀವತೆತ್ತದ್ದು ಭಾರಿ ಸುದ್ದಿಯಾಗಿದೆ.**




ವಿಶ್ವರಂಗ

ನಮ್ಮ ಹುಟ್ಟು ನಮ್ಮ ಕೈಲಿಲ್ಲ. ನಾವು ಇಂತಹ ಕುಟುಂಬದಲ್ಲಿ ಹುಟ್ಟಬೇಕು ಎಂದು ಬಯಸುವುದು ಕೂಡ ಸಾಧ್ಯವಿಲ್ಲ. ಜಗತ್ತಿನ ವ್ಯವಹಾರಗಳು ತಿಳಿಯಲು ಶುರುಮಾಡಿದ ಮೇಲಷ್ಟೇ ಓಹೋ ನಾನು ಇಂತಹ ಜಾತಿಗೆ, ಧರ್ಮಕ್ಕೆ ಅಥವಾ ಇಂತಹ ಪ್ರಭಾವಿ ಅಥವಾ ಬಡ ಕುಟುಂಬದಲ್ಲಿ ಹುಟ್ಟಿದ್ದೇನೆ ಎನ್ನುವುದು ತಿಳಿಯುತ್ತದೆ. ವ್ಯಕ್ತಿಯ ಮಟ್ಟಿಗೆ ಹುಟ್ಟಿನ ಮತ್ತು ಸಾವಿನ ಮೇಲೆ ಎಳ್ಳಷ್ಟೂ ನಿಯಂತ್ರಣವಿಲ್ಲ.

ಇವುಗಳ ನಡುವಿನ ಜೀವನದಲ್ಲೂ ಕೂಡ ನಮ್ಮ ನಿಯಂತ್ರಣ ಅಷ್ಟಕಷ್ಟೇ. ನಮ್ಮ ಕೈಲಿರುವುದು ಯಾವ ಮಾರ್ಗದಲ್ಲಿ ಬದುಕ ಸಾಗಿಸಬೇಕು ಎನ್ನುವುದಷ್ಟೆ. ನಂತರದ ಪ್ರಯಾಣದಲ್ಲಿ ಎದುರಾಗುವ ಗೆಲುವು ಅಥವಾ ಸೋಲುಗಳಲ್ಲಿ ಕೂಡ ನಮ್ಮ ನಿಯಂತ್ರಣ ಹೇಳಿಕೊಳ್ಳುವಂತದ್ದಲ್ಲ. ಫಲಿತಾಂಶ ನಮ್ಮ ಕೈಲಿಲ್ಲ. ಜೀವನದಲ್ಲಿ ನಡೆಯುವ 99 ಪ್ರತಿಶತ ಘಟನೆಗಳ ಮೇಲೆ ನಮ್ಮ ಹಿಡಿತವಿಲ್ಲ. ನಮ್ಮ ಕೈಲಿರುವುದು 1 ಪ್ರತಿಶತ ಮಾತ್ರ!

ನಮ್ಮ ಕೈಲಾದದ್ದ ಸರಿಯಾಗಿ ನಿಷ್ಠೆಯಿಂದ ಮಾಡುವುದು, ಫಲಿತಾಂಶ ಅಂದುಕೊಂಡ ಮಟ್ಟಕ್ಕೆ ಬರದಿದ್ದರೆ ಮರಳಿ ಪ್ರಯತ್ನಿಸುವುದು ಮಾತ್ರ ನಮ್ಮ ಕೈಲಿದೆ. ಆದರೆ ನಾವು? ನಮಗೆ ಇದ್ಯಾವುದೂ ಬೇಕಿಲ್ಲ. ಸಮಾಜದಲ್ಲಿನ ಬದಲಾವಣೆಗಳಿಗೆ, ಅವರಿವರ ಬಗ್ಗೆ ಪ್ರತಿಕ್ರಿಯೆ ಕೊಡುವುದರಲ್ಲಿ ನಮಗೆ ಇನ್ನಿಲ್ಲದ ಆತ್ಮತೃಪ್ತಿ ಸಿಗುತ್ತಿದೆ.

ಕಳೆದ ಎರಡು ಮೂರು ದಿನದಿಂದ ಮಹಾರಾಷ್ಟ್ರದಲ್ಲಿ ಹುಡುಗನೊಬ್ಬ ಐಫೋನ್ ಕೊಡಿಸಲಿಲ್ಲ ಎನ್ನುವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡದ್ದು, ಅವನನ್ನು ಉಳಿಸಿಕೊಳ್ಳುವ ಭರದಲ್ಲಿ ಆತನ ಅಪ್ಪನೂ ಬೆಟ್ಟದಿಂದ ಬಿದ್ದದ್ದು ಅದನ್ನು ಕಂಡು ಆತನ ತಾಯಿಯೂ ಕ್ಷಣ ಮಾತ್ರವೂ ಯೋಚಿಸದೆ ಬೆಟ್ಟದಿಂದ ಹಾರಿ ಜೀವತೆತ್ತದ್ದು ಭಾರಿ ಸುದ್ದಿಯಾಗಿದೆ. ಇವತ್ತು ಹೇಳಿ ಕೇಳಿ ಸೋಶಿಯಲ್ ಮೀಡಿಯಾ ಯುಗ. ಕಂಟೆಂಟ್ ಕ್ರಿಯೇಟರ್ಸ್ ಎನ್ನುವ ಮಹಾ ಸಮೂಹಕ್ಕೆ ಸದಾ ಹೊಸ ಆಹಾರ ಬೇಕು.

ಕೇಳುವುದಿನ್ನೇನು? ಒಬ್ಬರು ಒಂದು ಕೋನದಲ್ಲಿ ವಿವರಿಸಿದರೆ ಸಾಕು. ಅದು ಸರಿಯೇ, ತಪ್ಪೇ ಎಂದು ಪರಾಮರ್ಶಿಸುವ ವ್ಯವಧಾನ ಯಾರಿಗೂ ಇಲ್ಲ. ಎಲ್ಲರಿಗೂ ಸುದ್ದಿ ಹಳತಾಗುವ ಮುನ್ನ ತಮ್ಮ ತಮ್ಮ ಚಾನಲ್‌ನಲ್ಲಿ ಬಿತ್ತರಿಸಿ ವ್ಯೂಸ್ ಪಡೆದುಕೊಳ್ಳುವ ತರಾತುರಿ. ನಾವು ನಮ್ಮ ತಪ್ಪುಗಳಿಗೆ ವಕೀಲರಾಗಿ ಬದಲಾಗುತ್ತೇವೆ. ಅದೇ ಇತರರ ತಪ್ಪಿಗೆ ನ್ಯಾಯಾಧೀಶರಾಗಿ ಬದಲಾಗಿ ಬಿಡುತ್ತೇವೆ.

ನಮ್ಮಲ್ಲಿ ಒಂದು ಆಡುಮಾತಿದೆ, ಪ್ರತ್ಯಕ್ಷ ಕಂಡರೂ, ಪ್ರಮಾಣಿಸಿ ನೋಡು ಎನ್ನುತ್ತದೆ ಆ ಮಾತು. ಇವತ್ತಿಗೆ ಇಂತಹ ಮಾತುಗಳಿಗೆ ಬೆಲೆ ಇಲ್ಲವಾಗಿದೆ. ಎಲ್ಲವೂ ಟೈಮ್ ಬೌಂಡ್! ಈ ಕ್ಷಣದ ಸುದ್ದಿ ಮುಂದಿನ ಕ್ಷಣಕ್ಕೆ ಹಳಸಿರುತ್ತದೆ ಎನ್ನುವ ಕಾಲಘಟ್ಟದಲ್ಲಿದ್ದೇವೆ. ಸರಿ ತಪ್ಪು ವಿವೇಚಿಸುತ್ತಾ ಕುಳಿತರೆ ಅವಕಾಶ ಕೈ ತಪ್ಪಿ ಹೋಗುತ್ತದೆ ಎನ್ನುವ ಮಟ್ಟಕ್ಕೆ ನಾವು ಸಮಾಜವಾಗಿ ಬದಲಾಗಿದ್ದೇವೆ.

ಮೀಡಿಯಾ ಹೌಸುಗಳನ್ನು ನಾವು ಬೈಯುತ್ತೇವೆ. ವಿವೇಚನೆ ಇಲ್ಲ ಎನ್ನುತ್ತೇವೆ. ಇವತ್ತಿನ ಸೋಶಿಯಲ್ ಮೀಡಿಯಾ ಕಂಟೆಂಟ್ ಕ್ರಿಯೇಟರ್ಸ್ ಏನು ಮಾಡುತ್ತಿದ್ದಾರೆ? ಎಲ್ಲೋ ಬೆರಳೆಣಿಕೆಯ ಜನ ಹೊಸತಿಗೆ, ಮೌಲ್ಯ ಹೆಚ್ಚಿಸುವ ಕಂಟೆಂಟ್ ಬಗ್ಗೆ ಯೋಚಿಸುತ್ತಿದ್ದಾರೆ. ಉಳಿದಂತೆ ಸುದ್ದಿ ಮಾಧ್ಯಮಗಳಿಗಿಂತ ವೇಗವಾಗಿ ನೀಡಬೇಕು ಎನ್ನುವ ಧಾವಂತಕ್ಕೆ ಯುಟ್ಯೂಬ್ ಮತ್ತಿತರ ಸೋಶಿಯಲ್ ಮೀಡಿಯಾ ಸ್ಟಾರುಗಳು, ಚಾನಲ್‌ಗಳು ಪೈಪೋಟಿಗೆ ಬಿದ್ದಿವೆ.

ಅಸಲಿಗೆ ಆತ್ಮಹತ್ಯೆ ಮಾಡಿಕೊಂಡ ಹುಡುಗ ಐಫೋನಿಗಾಗಿ ಹಾಗೆ ಮಾಡಲಿಲ್ಲ ಎನ್ನುವ ಸತ್ಯ ಯಾರಿಗೂ ಬೇಕಾಗಿರುವುದಿಲ್ಲ. ಕಂಟೆಂಟ್ ಅಪ್ಲೋಡ್ ಮಾಡಿದವರ ಕಥೆ ಒಂದು ಕಡೆಯಾದರೆ, ಅದನ್ನು ಕನ್ಸ್ಯೂಮ್ ಮಾಡುವ ಬಹುದೊಡ್ಡ ಸಮೂಹದ ಕಥೆ ಇನ್ನಷ್ಟು ದೊಡ್ಡ ಕಥೆ. ಇವತ್ತಿಗೆ ಯಾರನ್ನಾದರೂ ದೂಷಿಸಬೇಕು ಎನ್ನುವ ನಾಲಿಗೆಯ ತೀಟೆಗೆ ಇಂತಹ ಘಟನೆಗಳು ಆಹಾರ ಅಷ್ಟೇ.

ಇಂತಹ ಮಕ್ಕಳು ಏಕೆ ಹುಟ್ಟುತ್ತಾರೆ ಎಂದು ಪ್ರಶ್ನಿಸುವ ಜನ ಒಂದು ಕಡೆ, ಅವನ ಬೆಳಸಿದ್ದರಲ್ಲಿ ತಪ್ಪಿದೆ, ಅವನ ಪೋಷಕರದ್ದೇ ತಪ್ಪು ಎನ್ನುವ ಜಡ್ಜ್‌ಮೆಂಟ್ ನೀಡುವ ಸಮೂಹ ಇನ್ನೊಂದು ಕಡೆ. ಒಟ್ಟಾರೆ ತಲೆಗೊಂದು ಮಾತು. ಈ ಎಲ್ಲಾ ಗದ್ದಲಗಳ ನಡುವೆ ಸತ್ಯ ಉಸಿರುಗಟ್ಟಿ ಸತ್ತು ಹೋಗುತ್ತದೆ. ಥೇಟ್ ಆ ಮೂರು ಜೀವಗಳು ಕ್ಷಣದಲ್ಲಿ ಇಲ್ಲವಾದಂತೆ!

ಹೊಸ ಕಂಟೆಂಟ್, ಸುದ್ದಿ ಬರುವವರೆಗೆ ಈ ಸುದ್ದಿ ಜೀವಂತ. ಇವತ್ತಿನ ಯುವ ಜನಾಂಗದ ಬಗ್ಗೆಯಂತೂ ತಲೆಗೊಂದು ಮಾತು, ತಲೆಗೊಂದು ಒಪಿನಿಯನ್ನು ದಾಖಲಿಸುತ್ತಾ ಸಾಗುತ್ತಿದ್ದೇವೆ. ಇವತ್ತಿನ ಯುವ ಜನತೆ ಅಂದರೆ 15ರಿಂದ 29 ವಯಸ್ಸಿನವರು ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ 36.7 ಕೋಟಿ ಇದ್ದಾರೆ. ಇದು ನಮ್ಮ ದೇಶದ ಜನಸಂಖ್ಯೆಯ ಸರಿಸುಮಾರು 26 ಪ್ರತಿಶತ!

ಇವರಲ್ಲಿ ಸರಿಸುಮಾರು 9 ಕೋಟಿ ಜನರನ್ನು ನೀಟ್ ಎಂದು ವರ್ಗೀಕರಿಸಲಾಗಿದೆ. ಅಂದರೆ ಶಿಕ್ಷಣ, ಉದ್ಯೋಗ ಅಥವಾ ತರಬೇತಿಯಲ್ಲಿಲ್ಲದಿರುವುದು ಎಂದರ್ಥ. ಇಷ್ಟು ದೊಡ್ಡ ಸಂಖ್ಯೆಯ ಮಕ್ಕಳಿಗೆ ಯಾವುದೇ ಭವಿಷ್ಯವಿಲ್ಲ. ಬದುಕಿನಲ್ಲಿ ಉದ್ದೇಶವಿಲ್ಲ. ಬೆಳಿಗ್ಗೆ ಏಳುವುದಕ್ಕೆ ಒಂದು ಉದ್ದೇಶ ಬೇಕು. ಉದ್ದೇಶವೇ ಇಲ್ಲದೆ ಹೋದರೆ ಬದುಕಿಗೇನರ್ಥ? ಈ ಖಿನ್ನತೆ ಎನ್ನುವುದು ಈ ರೀತಿಯ ಉದ್ದೇಶವಿಲ್ಲದ ಬದುಕಿನಲ್ಲಿ ಬಹುಬೇಗ ಪ್ರವೇಶ ಪಡೆದುಕೊಳ್ಳುತ್ತದೆ. ಅದು ಯಾವಾಗ ಎಂಟ್ರಿ ಪಡೆದುಕೊಂಡಿತು, ಹೇಗೆ ಬೆಳೆಯುತ್ತಾ ಹೋಯ್ತು ಎನ್ನುವುದು ಕೂಡ ಗೊತ್ತಾಗುವುದಿಲ್ಲ.

ಆತ್ಮಹತ್ಯೆ ಎನ್ನುವುದು ಒಂದು ದಿನದಲ್ಲಿ, ಆ ಕ್ಷಣದಲ್ಲಿ ಮಾಡಿದ ನಿರ್ಧಾರವಂತೂ ಅಲ್ಲ. ನಿಧಾನವಾಗಿ ಅದು ರೂಪುಗೊಳ್ಳುತ್ತಾ ಹೋಗುತ್ತದೆ. ಅದನ್ನು ಗುರುತಿಸಿ, ಆರಂಭಿಕ ಹಂತದಲ್ಲಿ ಅದಕ್ಕೊಂದು ಸಮಾಧಾನ ಕಂಡುಕೊಳ್ಳಬೇಕು. ಪ್ರಸ್ತುತ ಸುದ್ದಿಯಲ್ಲಿರುವ ಹುಡುಗ ವರ್ಷದ ಹಿಂದೆಯೇ ಈ ರೀತಿಯ ಆತ್ಮಹತ್ಯೆಗೆ ಪ್ರಯತ್ನಪಟ್ಟಿದ್ದ ಎನ್ನುವ ಸುದ್ದಿ ಇದನ್ನು ಪುಷ್ಟೀಕರಿಸುತ್ತದೆ.

ಯಾವುದೂ ಒಂದು ದಿನದಲ್ಲಿ ಬಲಿಯುವುದಿಲ್ಲ. ಒಳಿತು ಅಥವಾ ಕೆಡುಕು ಎರಡಕ್ಕೂ ಸಮಯ ತಗಲುತ್ತದೆ. ಇವತ್ತಿಗೆ ಧ್ಯಾನ, ಯೋಗ, ಪ್ರಾಣಾಯಾಮ ಅಥವಾ ಇದ್ಯಾವುದೂ ಇಷ್ಟವಿಲ್ಲ ಎಂದವರು ಬಿರುಸು ನಡಿಗೆಯನ್ನಾದರೂ ರೂಢಿಸಿಕೊಂಡರೆ ಅಷ್ಟರಮಟ್ಟಿಗೆ ತಲೆಯಲ್ಲಿ ಕೆಟ್ಟ ಆಲೋಚನೆಗಳು ದೂರವಾಗುತ್ತವೆ. ಆದರೆ ಇವತ್ತಿಗೆ ಒಳ್ಳೆಯ ವಿಚಾರಗಳಿಗೆ ಬೆಲೆಯಿಲ್ಲ. ವಿವೇಕದ ಮಾತನ್ನಾಡಿದರೆ ಅವರನ್ನು ಅನ್ಯ ಗ್ರಹದ ಜೀವಿಯಂತೆ ಕಾಣಲಾಗುತ್ತದೆ.

ಬೆಂಗಳೂರು, ಮೈಸೂರು ಇತ್ಯಾದಿ ನಗರಗಳಲ್ಲಿ ಶಾಲೆ ಕಾಲೇಜಿನ ಮಕ್ಕಳನ್ನು ಉದ್ದೇಶಿಸಿ ಮಾತಾಡುವ ಅವಕಾಶ ನನಗೆ ಸಿಕ್ಕಿದೆ. ಎಡೆ ಕಾಣ ಸಿಗುವ ಒಂದು ಸಾಮಾನ್ಯ ಅಂಶ, ಮಕ್ಕಳಿಗೆ ಕೇಳುವ ವ್ಯವಧಾನ, ತನ್ಮಯತೆ ಇಲ್ಲವಾಗಿರುವುದು. ಒಂದು ತಾಸು ಕುಳಿತು ಹೇಳುವ ಮಾತನ್ನು ಕೇಳುವ ಶಕ್ತಿ ಅವರು ಕಳೆದುಕೊಂಡಿದ್ದಾರೆ. ಇನ್ನು ನಮ್ಮ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅದೆಷ್ಟು ಬರೆದರೂ, ಹೇಳಿದರೂ ಅದು ಕಡಿಮೆ. ಶಾಲೆ, ಕಾಲೇಜುಗಳು ಫೀಡರ್ ಸೆಂಟರ್‌ಗಳು ಅಷ್ಟೇ!

ಒಂದು ಹಂತದಿಂದ ಇನ್ನೊಂದು ಹಂತದ ಶಾಲೆ, ಕಾಲೇಜಿಗೆ ವಿದ್ಯಾರ್ಥಿಯನ್ನು ಒದಗಿಸುವ ಕಾರ್ಖಾನೆಗಳು. ಜಸ್ಟ್ ಫೀಡರ್ ಸೆಂಟರ್‌ಗಳು. 36 ಕೋಟಿ ಯುವ ಜನತೆಯಲ್ಲಿ 9 ಕೋಟಿ ಯುವ ಜನತೆಗೆ ನಾಳಿನ ಬಗ್ಗೆ ಕನಸಿಲ್ಲ, ಯೋಚನೆಯಿಲ್ಲ ಎನ್ನುವುದು ಬಹುದೊಡ್ಡ ಚಿಂತೆಯ ವಿಷಯ. ಇದು ಯೂರೋಪಿನ ಒಂದೆರಡು ದೇಶದ ಜನಸಂಖ್ಯೆಗೆ ಸಮ!

ಇದು ಭಾರತೀಯ ಸಮಾಜದ ಅತಿ ದೊಡ್ಡ ಪಿಡುಗು. ಇದರ ಬಗ್ಗೆ ಚರ್ಚೆಯಾಗಬೇಕು. ಇದು ಸುದ್ದಿಯಾಗಬೇಕು. ಆದರೆ ಇಂತಹ ಮಾತುಗಳು ಟ್ರಾಕ್ಷನ್ ಪಡೆದುಕೊಳ್ಳುವುದಿಲ್ಲ. ಇವತ್ತಿನ ಡಿಜಿಟಲ್ ಯುಗದಲ್ಲಿ ಎಲ್ಲವೂ ಟ್ರಾಕ್ಷನ್ ಮೇಲೆ ನಿಂತಿದೆ. ಎಲ್ಲವೂ ಹಣದ ಸುತ್ತ ಸುತ್ತುತ್ತದೆ. ಹಣ ಎಷ್ಟು ವ್ಯೂಸ್ ಬಂತು ಎನ್ನುವುದರ ಆಧಾರದ ಮೇಲೆ ನಿರ್ಧಾರವಾಗುತ್ತೆ ಹೊರತು ಕಂಟೆಂಟ್ ಮೌಲ್ಯದಿಂದಲ್ಲ!

36 ಕೋಟಿಯಲ್ಲಿ 9 ಕೋಟಿ ಹೊರತುಪಡಿಸಿದಾಗ 27 ಕೋಟಿ ಯುವ ಜನತೆ ಉಳಿದುಕೊಳ್ಳುತ್ತಾರೆ. ಇವರ ಭವಿಷ್ಯದ ಕಥೆಯೇನು? ಇದು ಇನ್ನಷ್ಟು ಭಯಕ್ಕೆ ತಳ್ಳುವ ಅಂಶ. ಇವತ್ತು ಇಂಜಿನಿಯರಿಂಗ್ ಮುಗಿಸಿದ ಮಕ್ಕಳ ಆರಂಭಿಕ ವೇತನ 26/27 ವರ್ಷದ ಹಿಂದೆ ನಾನು ಪಡೆಯುತ್ತಿದ್ದ ವೇತನಕ್ಕೆ ಸಮವಾಗಿದೆ.

ಟೈಮ್ ವ್ಯಾಲ್ಯೂ ಆಫ್ ಮನಿ ನಿಯಮದ ಪ್ರಕಾರ ಇವತ್ತಿನ ಮಕ್ಕಳು ಪಡೆಯುತ್ತಿರುವ ವೇತನಕ್ಕೆ ಬೆಲೆಯೇ ಇಲ್ಲ ಎನ್ನುವಂತಾಗಿದೆ. ಮೈಸೂರಿನಂತಹ ನಗರದಲ್ಲಿ ಹೊಸದಾಗಿ ಇಂಜಿನಿಯರಿಂಗ್ ಮುಗಿಸಿ ಬಂದ ಮಕ್ಕಳಿಗೆ ಹತ್ತು, ಹದಿನೈದು ಸಾವಿರ ರೂಪಾಯಿ ಮಾಸಿಕ ವೇತನವನ್ನು ಆಫರ್ ಮಾಡಲಾಗುತ್ತಿದೆ. ಇದು ಬೆಂಗಳೂರಿನಲ್ಲಿ ಸಹ ಹೆಚ್ಚು ಕಡಿಮೆ ಸೇಮ್ ಇದೆ. ಯಾವ ಪುರುಷಾರ್ಥಕ್ಕೆ ಓದಬೇಕು ಎಂದು ಮಕ್ಕಳು ಕೇಳಿದರೆ, ಈ ಕಾರಣಕ್ಕೆ ಓದಬೇಕು ಎಂದು ಪೋಷಕರು ಕೂಡ ಹೇಳುವ ಸ್ಥಿತಿಯಲ್ಲಿಲ್ಲ.

ಭಾರತದಲ್ಲಿ ಅತ್ಯಂತ ವೇಗವಾಗಿ ಇಂಜಿನಿಯರಿಂಗ್ ಕಾಲೇಜುಗಳು ಮುಚ್ಚುತ್ತಿವೆ. ಇದೊಂದು ರೀತಿಯಲ್ಲಿ ಒಳ್ಳೆಯದು. ನಾಲ್ಕು ವರ್ಷ ಪ್ರಯೋಜನಕ್ಕೆ ಬಾರದ ಅಥವಾ ಮಾಸಿಕ ಹದಿನೈದು ಸಾವಿರ ವೇತನ ಪಡೆಯಲು, ಮಾಸಿಕ 25/30 ಸಾವಿರ ವ್ಯಯಿಸಿ ಏಕೆ ಓದಬೇಕು? ಇಲ್ಲಿಯವರೆಗೆ ಇದು ಸರಿ. ಆದರೆ ಹೀಗೆ ಕಾಲೇಜು ಮುಚ್ಚುವ ಬದಲು ಬದುಕಿಗೆ ಬೇಕಾಗುವ ಕೌಶಲ ಕಲಿಸುವ ಶಾಲೆಗಳನ್ನಾಗಿ ಏಕೆ ಇವನ್ನು ಪರಿವರ್ತಿಸುತ್ತಿಲ್ಲ? ಕೆಲಸ, ಟ್ರೇನಿಂಗ್, ಓದು ಯಾವುದೂ ಇಲ್ಲದ ಕನಸಿಲ್ಲದ 9 ಕೋಟಿ ಜನಸಂಖ್ಯೆ ಟೈಮ್ ಬಾಂಬ್ ಇದ್ದ ಹಾಗೆ. ಯಾವಾಗ ಬೇಕಾದರೂ ಸೋಟಿಸಬಹುದು.






ಇಂಗ್ಲೀಷಿನಲ್ಲಿ ಎ ಸ್ಪಾರ್ಕ್ ನೆಗ್ಲೆಕ್ಟೆಡ್ ಬರ್ನ್ಸ್‌ದ ಹೌಸ್ ಎನ್ನುವ ಮಾತಿದೆ. ಒಂದು ಸಣ್ಣ ಬೆಂಕಿ ಕಿಡಿ ಇಡೀ ಊರನ್ನೇ ಸುಡುವ ಶಕ್ತಿಯನ್ನು ಹೊಂದಿದೆ. ನಾವು ಈ ಸಮಸ್ಯೆಯ ಅಗಾಧತೆಯನ್ನು ಕಡೆಗಣಿಸುತ್ತಿದ್ದೇವೆ. ಇದು ನಮ್ಮ ಸಮಾಜವನ್ನು ಸುಡುವ ಮುಂಚೆ ನಾವು ಎಚ್ಚೆತ್ತುಕೊಳ್ಳಬೇಕಿದೆ. ಮಾನಸಿಕ ಆರೋಗ್ಯದ ಬಗ್ಗೆ ನಮ್ಮ ದೇಶದಲ್ಲಿ ಹೆಚ್ಚಿನ ಮಾತು ಕತೆ ಆಗುವುದೇ ಇಲ್ಲ. ಬದುಕಿಗೊಂದು ಉದ್ದೇಶವಿಲ್ಲದ ಬಹುದೊಡ್ಡ ಸಮೂಹದ ಮಾನಸಿಕತೆ ಬಗ್ಗೆ ನಾವು ಎಚ್ಚರ ವಹಿಸಬೇಕಿದೆ.

ಉದ್ದೇಶವಿಲ್ಲದ ಪ್ರತಿಯೊಂದು ಜೀವಿಯೂ ಟೈಮ್ ಬಾಂಬ್ ಇದ್ದ ಹಾಗೆ. ಅವು ಸಿಡಿಯುವ ಮುಂಚೆ ನಾವು ಅದರ ಬಗ್ಗೆ ಒಂದಷ್ಟು ಕ್ರಮವನ್ನು ಕೈಗೊಳ್ಳಬೇಕಿದೆ. ಈಗ ಮತ್ತೊಮ್ಮೆ ಮೊದಲ ಪ್ಯಾರಾ ಓದಿ ಪ್ಲೀಸ್! ನಮ್ಮ ನಿಯಂತ್ರಣವಿಲ್ಲದ ವಿಚಾರಗಳಲ್ಲಿ ಸಮಯ ಸರಿದು ಹೋಗುತ್ತಿದೆ. ನಮ್ಮ ಕೈಲಿರುವುದು ಕೇವಲ ಒಂದು ಪ್ರತಿಶತ. ಸರಕಾರ, ಸಂಘ-ಸಂಸ್ಥೆಗಳು ಶೀಘ್ರ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುವ ಅವಶ್ಯಕತೆಯಿದೆ.

ಸೋಶಿಯಲ್ ಮೀಡಿಯಾಕ್ಕೂ ಒಂದು ಕಡಿವಾಣದ ಅವಶ್ಯಕತೆಯಿದೆ. ಸಮಾಜವನ್ನು ಒಳ್ಳೆಯ ಕಡೆಗೆ ಕರೆದೊಯ್ಯುವ ಕೆಲಸವಾಗಬೇಕಿದೆ. ಕಂಡಿದ್ದು, ಕೇಳಿದ್ದು ಎಲ್ಲವನ್ನೂ ಬಿತ್ತರಿಸುವ ಮುನ್ನ ಫ್ಯಾಕ್ಟ್ ಚೆಕ್ ಕಡ್ಡಾಯಗೊಳಿಸಬೇಕಿದೆ.

ಶಾಲೆ, ಕಾಲೇಜು ಕಲಿಕೆಯ ಜೊತೆಗೆ ವಿದ್ಯಾರ್ಥಿಯ ಇಷ್ಟದ ಒಂದು ಕೌಶಲ ಕಲಿಯಲು ಅವರನ್ನು ಪ್ರೇರೇಪಿಸುವ ಅವಶ್ಯಕತೆಯಿದೆ. ಇನ್ ಫ್ಯಾಕ್ಟ್ ಕೆಲವು ಕೌಶಲಗಳನ್ನು ಕಡ್ಡಾಯಗೊಳಿಸಿದರೂ ತಪ್ಪಿಲ್ಲ. ಈ ವೇಳೆಗೆ ಕೆಲವರಿಗೆ ಇವೆಲ್ಲವೂ ಹೇಳಲು, ಕೇಳಲು ಬಹಳ ಚಂದ ಆದರೆ ಇದು ಸಾಧ್ಯವೇ ಎನ್ನುವ ಪ್ರಶ್ನೆ ಹುಟ್ಟಿರುತ್ತದೆ.

ಅವರಿಗಾಗಿ ಮತ್ತು ನಿಮ್ಮೆಲ್ಲರಿಗಾಗಿ, ಕಳೆದ ಎರಡು ದಶಕಗಳ ಹಿಂದೆ ಇದ್ದ ಪ್ರಪಂಚವನ್ನು ಒಮ್ಮೆ ಗಮನಿಸಿ ನೋಡಿ, ಇಂದಿನ ಪ್ರಪಂಚವನ್ನು ಗಮನಿಸಿ ನೋಡಿ. ಆಗಿರುವ ಅಗಾಧ ಬದಲಾವಣೆ ಕಣ್ಣಿಗೆ ಕಾಣುತ್ತದೆ.

ನೀವು ಅಂದುಕೊಂಡ ತಕ್ಷಣ, ನಿರ್ಧಾರ ತೆಗೆದುಕೊಂಡ ತಕ್ಷಣ ಬದುಕು ಬದಲಾಗುವುದಿಲ್ಲ. ಬೆಂಬಿಡದೆ ಅಂದುಕೊಂಡ ಕಡೆಗೆ ನಿಲ್ಲದ ಪ್ರಯಾಣವಿರಬೇಕು. ಅಂದುಕೊಂಡದ್ದನ್ನು ಕಾರ್ಯರೂಪಕ್ಕೆ ತರಬೇಕು. ಆಗ ಸಮಯದ ಜೊತೆಗೆ ಬದುಕು ಖಂಡಿತ ಬದಲಾಗುತ್ತದೆ. ಎಲ್ಲವೂ ಸರಿ, ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು?

**- ರಂಗಸ್ವಾಮಿ** ಎಂ.

# ಮನ್ವಿತ್ ನ ಸಮಯಪ್ರಜ್ಞೆ

ಇದು ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನರಿಕೊಂಬು ಈ ಶಾಲೆಯಲ್ಲಿ ನಡೆದ ಘಟನೆ.

ದಿನಾಂಕ 13.8.2026ರ ಗುರುವಾರದಂದು ಶಾಲೆಯಲ್ಲಿ ಬಿಸಿಯೂಟ ತಯಾರಿ ನಡೆಯುತ್ತಿತ್ತು. ಅಡುಗೆ ಸಿಬ್ಬಂದಿ ಅಡುಗೆ ಕಾರ್ಯದಲ್ಲಿ ತೊಡಗಿದ್ದರು. ಅವರಲ್ಲಿ ಒಬ್ಬರು ಸಾಂಬಾರಿಗಾಗಿ ಕಾಯಿ ತುರಿಯಲು ವಿದ್ಯುತ್ ಚಾಲಿತ ತುರೀಮಣೆ ಬಳಸಿದ್ದರು. ಆಕಸ್ಮಿಕವಾಗಿ ಅಡುಗೆ ಸಿಬ್ಬಂದಿಯ ಕೈ ಬೆರಳು ವಿದ್ಯುತ್ ತುರಿ ಮಣೆಯಲ್ಲಿ ಸಿಕ್ಕಿಹಾಕಿಕೊಂಡು ಕಿರುಚಿದ್ದಾರೆ. ಅದೇ ಸಮಯದದಲ್ಲಿ ಶಾಲೆಯ ಅಂಗಳದಲ್ಲಿ ಆಟವಾಡುತ್ತಿದ್ದ 5ನೇ ತರಗತಿ ವಿದ್ಯಾರ್ಥಿ ಮನ್ವಿತ್ ಕಿರುಚಾಟ ಕೇಳಿ ಓಡಿ ಬಂದು ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಮುಂದಾಗುತ್ತಿದ್ದ ಅನಾಹುತ ತಪ್ಪಿಸಿದ್ದಾನೆ. ಸ್ವಯಂ ನಿರ್ಧಾರದಿಂದ ಸಮಯ ಪ್ರಜ್ಞೆ ಮೆರೆದ ಬಾಲಕನ ಧೈರ್ಯವನ್ನು ರಾಜ್ಯದ ಮುಖ್ಯಮಂತ್ರಿ ಕೂಡ ಸಾಮಾಜಿಕ ಜಾಲತಾಣದಲ್ಲಿ ಮೆಚ್ಚಿ ಅಭಿನಂದನೆ ಸಲ್ಲಿಸಿದ್ದಾರೆ.

ದಿನಾಂಕ 14.08.2026ರಂದು ಈತನಿಗೆ ಅಭಿನಂದನೆ ಸಲ್ಲಿಸಲು ನಾನು, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸಚಿನ್, ಸಹಾಯಕ ನಿರ್ದೇಶಕ ನೋಣಯ್ಯ, ಎಸ್ ಡಿ ಎಮ್ ಸಿ ಅಧ್ಯಕ್ಷರು, ಶಾಲಾ ಸಿಬ್ಬಂದಿ, ವಿದ್ಯಾರ್ಥಿಯ ತಂದೆತಾಯಿ ಮತ್ತು ಮಕ್ಕಳ ಸಮ್ಮುಖದಲ್ಲಿ ಅಭಿನಂದನೆ ಸಲ್ಲಿಸಲಾಯಿತು. ಇದರಲ್ಲೇನು ವಿಶೇಷತೆ?. ಅನ್ನಬಹುದು. ಬಾಲಕ ಮನ್ವಿತ್ ಕಿರುಚಾಟ ಕೇಳಿ ಹೋಗಿ ನೋಡಿ ಗಾಬರಿಗೊಂಡು ಸಹಾಯಕ್ಕೆ ಬೇರೆಯವರನ್ನು ಕರೆದಿಲ್ಲ ಅಥವಾ ಭಯದಿಂದ ಓಡಿಹೋಗಿ ಶಿಕ್ಷಕರ ಗಮನಕ್ಕೆ ತರಲು ಪ್ರಯತ್ನಿಸಿಲ್ಲ. ಹೆದರದೆ ಸ್ವಯಂಪ್ರಜ್ಞೆಯಿಂದ ವಿದ್ಯುತ್ ಸಂಪರ್ಕ ತಪ್ಪಿಸಿದ್ದು ಒಳ್ಳೆಯ ಕಾರ್ಯ. ಈ ಕಾರ್ಯವನ್ನು ತೋರಿಸಿಕೊಳ್ಳಲು, ಮಾನ್ಯತೆಗಾಗಿ ಅಥವಾ ಹೆಸರಿಗಾಗಿ ಮಾಡಿದ್ದಲ್ಲ. ಇದರಿಂದ ಮುಂದೆ ಆಗುತ್ತಿದ್ದ ದೊಡ್ಡ ಅನಾಹುತ ತಪ್ಪಿದೆ ಅದಕ್ಕಾಗಿ ಈ ಬಾಲಕನಿಗೆ ಅಭಿನಂದನೆ ಸಲ್ಲಿಸಲಾಗಿದೆ.

ಭಾರತೀಯ ಧಾರ್ಮಿಕ ಸಾಹಿತ್ಯದಲ್ಲಿ ದೇವರು ಕಷ್ಟಕಾಲದಲ್ಲಿ ನೆರವಿಗೆ ಬರುತ್ತಾನೆ ಅಂತ ಹೇಳುತ್ತಾರೆ. ಅಂದರೆ ದೇವರು ದೇವರಾಗಿ ಬಂದು ಸಹಾಯ ಮಾಡುವುದಿಲ್ಲ, ದೇವರು ಮಾನವನ ರೂಪದಲ್ಲಿ, ವಸ್ತುರೂಪದಲ್ಲಿ ಸಹಾಯ ಮಾಡುತ್ತಾನೆ. ಅಂದರೆ ನಾವೆಲ್ಲರೂ ದೇವರಾಗಲು ಸಾಧ್ಯವಿದೆ. ಹೇಗೆ?. ಒಳ್ಳೆಯ ಕಾರ್ಯದಿಂದ ದೇವರಾಗಬಹುದು. ಆತನ ಅಣ್ಣನೂ ಕೂಡ 7ನೇ ತರಗತಿ ಓದುತ್ತಿದ್ದು ಅದೇ ಶಾಲೆಯಲ್ಲಿದ್ದಾನೆ. ಆತನ ತಂದೆಗೆ ಮಾತು ಬರುವುದಿಲ್ಲ. ಆದರೆ ತಂದೆ ತಾಯಿ ಶಾಲೆಯ ತೋಟ ನಿರ್ವಹಣೆ ಮಾಡಲು ಸ್ವಯಂ ಪ್ರೇರಣೆಯಿಂದ ಶ್ರಮಿಸುತ್ತಿರುವುದನ್ನು ಶಾಲೆಗೆ ಭೇಟಿ ನೀಡಿದಾಗ ಗಮನಿಸಿರುತ್ತೇನೆ.

ನಮ್ಮಲ್ಲಿ ದಾಸೋಹ ಎನ್ನುವ ಕ್ರಮವಿದೆ. ದಾಸೋಹ ಎಂದರೆ ನಮ್ಮಲ್ಲಿರುವುದನ್ನು ಉಚಿತವಾಗಿ ಆಶಾರಹಿತವಾಗಿ ಹಂಚಿಕೊಳ್ಳುವುದು. ವಿದ್ಯೆಯಿತ್ತು ವಿದ್ಯೆಯನ್ನು ಉಚಿತವಾಗಿ ಹಂಚಿದರೆ ವಿದ್ಯಾ ದಾಸೋಹ ಎನ್ನುತ್ತೇವೆ. ಆಹಾರ ಇದ್ದು ಆಹಾರ ಹಂಚಿದರೆ ಆಹಾರ ದಾಸೋಹ ಎನ್ನುತ್ತೇವೆ. ಒಬ್ಬ ಅಸಕ್ತ ದಾರಿದಾಟಲು ಕಷ್ಟ ಪಡುತ್ತಿದ್ದಾನೆ ಎಂದರೆ ಅತನಿಗೆ ನಮ್ಮ ಶಕ್ತಿ ಬಳಸಿ ದಾರಿ ದಾಟಿಸಿದರೆ ಅದಕ್ಕೆ ಶಕ್ತಿ ದಾಸೋಹ ಎನ್ನುವರು. ಇದೇ ರೀತಿ ನೃತ್ಯದಾಸೋಹ, ಚಿತ್ರಕಲಾ ದಾಸೋಹ. ಬುದ್ಧಿ ದಾಸೋಹ ಮುಂತಾದವುಗಳು ಇದೆ. ಭಗವಂತ ಎಲ್ಲರಲ್ಲೂ ಒಂದೆ ಶಕ್ತಿ ಇಡಲಿಲ್ಲ. ಒಂದು ವೇಳೆ ಎಲ್ಲರಿಗೂ ಗಂಟಲಲ್ಲಿ ಶಕ್ತಿ ಇಟ್ಟು ಎಲ್ಲರೂ ಯಾವಾಗಲೂ ಹಾಡುತ್ತಾ ಇರಿ ಎಂದು ಹೇಳಿದ್ದರೆ ಹಾಡಿನ ಸೌಂದರ್ಯವೇ ಹೋಗುತ್ತಿತ್ತು. ದೇವರು ಹಾಗೆ ಮಾಡಲಿಲ್ಲ. ಕೆಲವರಿಗೆ ಗಂಟಲಲ್ಲಿ ಶಕ್ತಿ ಇಟ್ಟನು. ಅವರು ಹಾಡುಗಾರಿಕೆಯಲ್ಲಿ ಮುಂದುವರಿಯುತ್ತಿದ್ದಾರೆ. ಕೆಲವರಿಗೆ ನಾಲಿಗೆಯಲ್ಲಿ ಶಕ್ತಿ ಇಟ್ಟು ಸುಂದರ ಮಾತುಗಳ ಮೂಲಕ ಪ್ರವಚನಗಳನ್ನು ನೀಡುತ್ತಿದ್ದಾರೆ. ಕೆಲವರಿಗೆ ಕೈಯಲ್ಲಿ ಶಕ್ತಿ ಇಟ್ಟು ಅವರು ಸುಂದರ ಶಿಲ್ಪ ಮತ್ತು ಚಿತ್ರಕಲೆ ಮಾಡುತ್ತಿದ್ದಾರೆ. ಕೆಲವರಿಗೆ ಕಾಲಿನಲ್ಲಿ ಶಕ್ತಿ ಇಟ್ಟು ನೃತ್ಯದಲ್ಲಿ, ಆಟೋಟಸ್ಪರ್ಧೆಯಲ್ಲಿ ಮುಂದುವರಿಯುತ್ತಿದ್ದಾರೆ. ಕೆಲವರಿಗೆ ಬುದ್ಧಿಯಲ್ಲಿ ಶಕ್ತಿ ಇಟ್ಟು ವಿಜ್ಞಾನಿ, ತಂತ್ರಜ್ಞಾನಿಯಾಗಿದ್ದಾರೆ. ಇನ್ನು ಕೆಲವರ ಎದೆಯಲ್ಲಿ ಶಕ್ತಿ ಇಟ್ಟು ಕವಿ, ತತ್ವಜ್ಞಾನಿಯಾಗಿದ್ದಾರೆ. ಯಾಕೆ ಹೀಗೆ ಅಂದರೆ ಜಗತ್ತು ವೈವಿಧ್ಯವಾಗಿ ವೈಭವದಿಂದ ಇರಬೇಕೆಂಬುದು. ಹಾಗಿರುವಾಗ ದೇವರು ನಮಗೆ ಕೊಟ್ಟಿರುವುದನ್ನ ಹಂಚಿಕೊಂಡು ಜಗತ್ತನ್ನ ಶ್ರೀಮಂತ ಮಾಡಿ ಆನಂದ ಪಡುವುದೇ ಜೀವನ.

ಈ ಘಟನೆಯಲ್ಲಿ ಮನ್ವಿತ್ ತನ್ನ ಬುದ್ಧಿಶಕ್ತಿ ಬಳಸಿ ಸಂತೋಷಕ್ಕೆ ಕಾರಣನಾಗಿದ್ದಾನೆ. ಹಾಗೆ ನಾವು ನಮ್ಮಲ್ಲಿ ಇರುವುದನ್ನ ಹಂಚಿ ಆನಂದ ಪಡೋಣ. ಆದರೆ ಕೆಲವರು ತೋರಿಕೆಗಾಗಿ. ಮಾನ್ಯತೆಗಾಗಿ ಹಂಚಿಕೊಳ್ಳುತ್ತಾರೆ. ಇದು ದಾಸೋಹ ಅಲ್ಲ, ಗಾಂಧೀಜಿ, ಅಂಬೇಡ್ಕರ್ ಇವರುಗಳ ಹೆಸರು ಚಿರಸ್ಥಾಯಿಯಾಗಿ ಇದೆ ಏಕೆ? ಅವರು ಮಾಡಿದ ಸುಂದರ ಆಶಾರಹಿತ ಕರ್ಮದಿಂದಾಗಿ. ಆಶಾರಹಿತ ಕರ್ಮವನ್ನು ಜಗತ್ತು ಗುರುತಿಸುತ್ತದೆ, ಗೌರವಿಸುತ್ತದೆ. ಜಗತ್ತಿನಲ್ಲಿ ಹಂಚಿ ಆನಂದ ಪಡಲು ಸಂಪನ್ಮೂಲದ ಕೊರತೆ ಇಲ್ಲ. ಆದರೆ ಆಸೆ ಪೂರೈಸುವಷ್ಟು ಜಗತ್ತಿನಲ್ಲಿ ಸಂಪತ್ತು ಇಲ್ಲ. ಅಲ್ಲವೇ?



**- ಎಂ.ಪಿ. ಜ್ಞಾನೇಶ್,**
ಮಂಗಳೂರು

# ತೆಂಗಿನಮರಗಳ ಅಸಹಜ ಬೆಳವಣಿಗೆಗೆ ಕಾರಣಗಳೇನು?

ಮನುಷ್ಯರಲ್ಲಿ ಒಬ್ಬರಿಗೊಬ್ಬರಿಗೆ ಸಾಮ್ಯತೆ ಇಲ್ಲ ಎಂಬುದು ನಮಗೆಲ್ಲಾ ತಿಳಿದಿರುವ ಸಂಗತಿ, ಅದೇ ರೀತಿಯಲ್ಲಿ ಸಸ್ಯಗಳಲ್ಲೂ ಒಂದು ಸಸ್ಯದಂತೆ ಮತ್ತೊಂದು ಸಸ್ಯ ಇರುವುದಿಲ್ಲ. ಪ್ರತಿಯೊಂದಕ್ಕೂ ಅದರದ್ದೇ ಆದ ವಿಭಿನ್ನ ಗುಣ ಇರುತ್ತದೆ. ಆ ಪ್ರಕಾರವೇ ಬೆಳವಣಿಗೆ ಇರುತ್ತದೆ. ತೆಂಗಿನ ವಿಚಾರದಲ್ಲೂ ಇದು ಪ್ರಸ್ತುತ ವಿಷಯ.

ನಾವು ನೆಟ್ಟು ಬೆಳೆಸುವ ತೆಂಗು ನಾಟಿ ಮಾಡಿ ನಾಲ್ಕರಿಂದ ಐದು ವರ್ಷಕ್ಕೆ ಫಸಲಿಗೆ ಆರಂಭವಾಗುತ್ತದೆ. ಆ ಸಮಯದವರೆಗೆ ಆ ಸಸಿ ಯಾವ ರೀತಿ ಫಲ ಕೊಡಬಹುದು ಎಂಬುದನ್ನು ಕರಾರುವಕ್ಕಾಗಿ ಹೇಳಲಿಕ್ಕೆ ಬರುವುದಿಲ್ಲ. ಕೆಲವು ಸಸಿಗಳು ಎಳವೆಯಲ್ಲಿ ಸಹಜ ಬೆಳವಣಿಗೆಯನ್ನೇ ತೋರ್ಪಡಿಸಿದರೂ ಬೆಳೆದು ಫಸಲಿಗಾರಂಭಿಸಿದ ತರುವಾಯ ತನ್ನ ಅಂತರ್ಗತ ನ್ಯೂನ್ಯತೆಯನ್ನು ತೋರಿಸಿದರೆ ಮತ್ತೆ ಕೆಲವು ಸಸಿಗಳು ಬೆಳೆಯುತ್ತಿರುವ ಹಂತದಲ್ಲೇ ಅದರ ಬೆಳವಣಿಗೆ ವೈಪರೀತ್ಯವನ್ನು ತೋರಿಸುತ್ತದೆ. ಬೆಳವಣಿಗೆ ನ್ಯೂನತೆಯಲ್ಲಿ ಎಲೆಗಳ ರಚನೆ, ಶಿರ ಭಾಗದ ಬೆಳವಣಿಗೆ, ಕಾಂಡದ ಬೆಳವಣಿಗೆ, ಕಾಯಿಯ ಗಾತ್ರ, ಮತ್ತು ಒಳ ರಚನೆ ಇವು ಮುಖ್ಯವಾದವುಗಳು. ಕೆಲವೊಂದು ಸಮಸ್ಯೆಗಳನ್ನು ಪೋಷಕಾಂಶದ ನಿರ್ವಹಣೆಯಿಂದ ಸರಿಪಡಿಸಬಹುದದರೂ ಕೆಲವು ಸಮಸ್ಯೆಗಳನ್ನು ಯಾವುದೇ ನಿರ್ವಹಣೆಯಲ್ಲಿ ಸಸಿಪಡಿಸಲಿಕ್ಕಾಗುವುದಿಲ್ಲ. ಇಂತಹ ಸಸಿಗಳನ್ನು ತೆಗೆದು ಬೇರೆ ಸಸಿ ನಾಟಿ ಮಾಡುವುದೊಂದೇ ಇದಕ್ಕಿರುವ ಪರಿಹಾರ.

ಕೆಲವು ಮಿತ್ರರು ಯಾವಾಗಲೂ ನಮ್ಮಲ್ಲಿ ಕೆಲವು ಸಲಹೆಗಳನ್ನು ಕೇಳುವುದುಂಟು ನಮ್ಮ ತೆಂಗಿನ ಸಸಿ ಪೊಳ್ಳು ಕಾಯಿಯನ್ನೇ ಬಿಡುತ್ತದೆ, ಒಂದೂ ಒಳ್ಳೆ ಕಾಯಿ ಬಿಡುವುದಿಲ್ಲ, ಹಾಗೆಂದು ಮರ ಚೆನ್ನಾಗಿಯೇ ಇದೆ ಎಂಬುದು ಕೆಲವರ ಪ್ರಶ್ನೆಯಾದರೆ ಮತ್ತೆ ಕೆಲವರು ನಮ್ಮ ತೆಂಗಿನ ಮರದ ಶಿರ ಭಾಗ ವಿಚಿತ್ರ ರೀತಿಯಲ್ಲಿ ಬೆಳೆಯುತ್ತಿದೆ. ಕಾಯಿಯೇ ಇಲ್ಲ, ಹೀಗೆಲ್ಲಾ ಪ್ರಶ್ನೆಗಳು. ಹೌದು, ಈ ಅಸಹಜತೆಯನ್ನು ಪ್ರತೀಯೊಬ್ಬ ಕೃಷಿಕನೂ ತಮ್ಮ ಹೊಲದಲ್ಲಿ ಅಥವಾ ಇನ್ಯಾವುದಾದರೂ ಕಡೆಯಲ್ಲಿ ಗಮನಿಸಿದ್ದಿರಬಹುದು. ಈ ಅಸಹಜ ಬೆಳವಣಿಗೆಗಳು ಅಪರೂಪದ್ದಾದರೂ ಅಂಥಹ ಮರಗಳು ಯಾರ ಹೊಲದಲ್ಲಿಯಾದರೂ ಇದ್ದರೆ ಅದು ನಾಳೆ ಸರಿಯಾಗಬಹುದು, ನಾಡಿದ್ದು ಆಗಬಹುದು ಎಂದು ಎಂದು ಅದನ್ನು ಹಾಗೇ ಉಳಿಸಿಕೊಳ್ಳುವ ಬದಲಿಗೆ ಆ ಮರವನ್ನು ಕಡಿದು ಬೇರೆ ಸಸಿ ನೆಟ್ಟರೆ ಉತ್ತಮ.

ತೆಂಗಿನ ಮರಗಳಲ್ಲಿ ಸುಮಾರು ಶೇ. 1-2 ರ ಪ್ರಮಾಣದಲ್ಲಿ ಇಂತಹ ಅಸಹಜ ಬೆಳವಣಿಗೆಯ ನ್ಯೂನತೆ ಇರುತ್ತದೆ. ಕೆಲವು ಸಸಿಗಳು ಚೆನ್ನಾಗಿಯೇ ಬೆಳೆಯುತ್ತವೆ. ಆದರೆ ಕಾಯಿ ಕೊಡುವುದಿಲ್ಲ, ಮತ್ತೆ ಕೆಲವು ವಕ್ರ ವಕ್ರವಾಗಿ ಬೆಳೆದು ಅಸಹಜತೆಯನ್ನು ತೋರಿಸುತ್ತವೆ. ಇಂಥಃ ಸಮಸ್ಯೆ ತೆಂಗು ಬೆಳೆಯಲಾಗುವ ಎಲ್ಲಾ ಕಡೆಯಲ್ಲೂ ಇದೆ.

ಇದಕ್ಕೆ ಕಾರಣ ಆ ತೆಂಗಿನ ಬೀಜದ ವಂಶ ಗುಣ. ಕೆಲವೊಂದು ಮರಗಳು ತಿಗಣೆ ಜಾತಿಯ ಕೀಟಗಳ ಉಪಟಳದಿಂದ ಸ್ವಲ್ಪ ಅಸಹಜವಾಗಿ ಬೆಳೆಯಬಹುದಾದರೂ, ಶಾಶ್ವತವಾಗಿ ಇದೇ ರೀತಿಯಲ್ಲಿ ಬೆಳವಣಿಗೆ ತೋರ್ಪಡಿಸುವ ಮರಗಳೆಲ್ಲಾ ವಂಶಗುಣದ ತೊಂದರೆಗೆ ಒಳಗಾದವುಗಳಿರುತ್ತವೆ. ಈ ತೊಂದರೆಗಳಿಗೆ ಹಲವಾರು ಕಾರಣಗಳು ಇವೆ. ಆದರೆ ಸರಳವಾಗಿ ಹೇಳಬೇಕೆಂದರೆ ನಾವು ಆಯ್ಕೆ ಮಾಡುವ ಬೀಜದಲ್ಲಿ ಈ ತೊಂದರೆಯ ಮೂಲ ಗುಣ ಸೇರಿರುತ್ತದೆ.



ನಾವು ಆಯ್ಕೆ ಮಾಡುವ ಯಾವುದೇ ಬೀಜದಲ್ಲಿ ಒಂದು ಭ್ರೂಣ ಇರುತ್ತದೆ. ಈ ಭ್ರೂಣ ಸಸ್ಯದ ಮೊಳಕೆ ಹಾಗೂ ಅದರ ನಂತರದ ಬೆಳವಣಿಗೆಗೆ ಮೂಲ ಪ್ರೇರಕ. ಭ್ರೂಣಕ್ಕೆ ಉಂಟಾದ ಯಾವುದೇ ತೊಂದರೆ ಸಸ್ಯದ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಅಪರೂಪದಲ್ಲಿ ಒಂದು ತೆಂಗಿನ ಬೀಜ ಎರಡು - ಮೂರು - ನಾಲ್ಕು ಮೊಳಕೆ ಒಡೆಯುವುದನ್ನು ನಾವು ಕಂಡಿರಬಹುದು. ಇದಕ್ಕೆ ಕಾರಣ ಅಲ್ಲಿ ಅವಳಿ ಅಥವಾ ತ್ರಿವಳಿ ಭ್ರೂಣ ಇರಬಹುದು. ಅದೇ ರೀತಿಯಲ್ಲಿ ತೆಂಗಿನ ಸಸಿ ಬೆಳೆದು ಮರವಾಗುವ ಸಮಯದಲ್ಲಿ ಎರಡು ಟಿಸಿಲು ಒಡೆದುದನ್ನೂ ಕಂಡಿರಬಹುದು. ಇದಕ್ಕೆ ಕಾರಣ ಆ ಭ್ರೂಣವೇ ಹೊರತು ಬೇರೆ ಏನೂ ಅಲ್ಲ, ಭ್ರೂಣಕ್ಕೆ ಪ್ರಾಕೃತಿಕವಾಗಿ ಅಥವಾ ಭೌತಿಕವಾಗಿ ಏನಾದರೂ ತೊಂದರೆಗಳಾದಲ್ಲಿ ಇಂತಹ ಸಮಸ್ಯೆಗಳು ಉಂಟಾಗುತ್ತವೆ.

ಪ್ರಾಕೃತಿಕವಾಗಿ ಆಗುವ ಘಾಸಿ: ತೆಂಗಿನ ಮರದಲ್ಲಿ ಸಾಮಾನ್ಯವಾಗಿ ಕೃತಕ ಪರಾಗಸ್ಪರ್ಶದ ಮೂಲಕ ಕಾಯಿ ಕಚ್ಚುತ್ತದೆ. ಪರಾಗ ಕಣಗಳು ಆಯಾ ಕ್ರೋಮೋಸೋಮಿನ ವರ್ಗಕ್ಕೆ ಮಾತ್ರ ಹೊಂದಿಕೆಯಾಗುವುದಾದರೂ ಕೆಲವೊಮ್ಮೆ ಪರಾಗ ಕಣಗಳಲ್ಲಿ ಏನಾದರೂ ಸೂಕ್ಷ್ಮ ದೋಷಗಳಿದ್ದು ಅವುಗಳಿಂದ ಪರಾಗ ಸ್ಪರ್ಶ ಕ್ರಿಯೆ ನಡೆದರೆ ಅದರಿಂದ ಫಲಿಸಿದ ಕಾಯಿಗೆ ಆ ಗುಣ ವರ್ಗಾವಣೆಯಾಗಿ ಅದು ಸಸಿಯಾಗಿ ಮರವಾದಾಗ ಅದರ ನ್ಯೂನತೆಯು ಬೆಳವಣಿಗೆ ಅಥವಾ ಇನ್ಯಾವುದೇ ರೀತಿಯಲ್ಲಿ ತೋರ್ಪಡಬಹುದು. ಕಾಯಿಯ ಮೂರು ಕಣ್ಣುಗಳಲ್ಲಿ ಒಂದು ಮೆದು ಕಣ್ಣಾಗಿದ್ದು ಅದರ ಒಳಗೆ ಒಂದು ಅಕ್ಕಿಯ ತರಹ ಇರುವ ಭಾಗವೇ ಭ್ರೂಣ. ಈ ಭ್ರೂಣಕ್ಕೆ ಕಾಯಿಯ ಎಲ್ಲಾ ಮಾತ್ರ ಗುಣವೂ ಸೇರಿರುತ್ತದೆ. ಈ ಭ್ರೂಣವೇ ಬೆಳೆದು ಸಸಿಯಾಗುವ ಅಂಗವಾಗಿರುತ್ತದೆ. ಕೆಲವೊಂದು ಹವಾಮಾನ ವೈಪರೀತ್ಯಗಳಾದ ವಿಪರೀತ ಚಳಿ, ಮುಂತಾದವುಗಳ ಕಾರಣದಲ್ಲೂ ಭ್ರೂಣಕ್ಕೆ ಘಾಸಿ ಉಂಟಾಗುತ್ತದೆ. ಸಮರ್ಪಕವಾಗಿ ಪರಾಗ ಕಣಗಳು ದೊರೆಯದಿದ್ದರೂ ಕೆಲವೊಮ್ಮೆ ಭ್ರೂಣದ ಬೆಳವಣಿಗೆ ವ್ಯತ್ಯಾಸವಾಗುತ್ತದೆ. ಪಕ್ಕದಲ್ಲಿ ಯಾವುದೋ ಶಾರೀರಿಕ ತೊಂದರೆ ಒಳಗೊಂಡ ಮರ ಇದ್ದರೆ, ಅದರ ಪರಾಗ ಕಣಗಳು ಆರೋಗ್ಯವಂತ ಮರದ ಹೂವಿಗೆ ಲಭ್ಯವಾದರೂ ಸಹ ಅದರಲ್ಲಿ ನ್ಯೂನತೆ ಉಂಟಾಗಬಹುದು.

ಭೌತಿಕ ಕಾರಣಗಳು: ಮರದಲ್ಲಿ ಸಹಜವಾಗಿ ಆಗುವ ತೊಂದರೆಗಳಲ್ಲದೆ ನಮ್ಮ ಕೈಯಿಂದ ಆಗುವ ತೊಂದರೆಗಳಿಗೆ ಭೌತಿಕ ಕಾರಣಗಳು ಎನ್ನಬಹುದು. ಬೀಜಕ್ಕಿಡುವ ತೆಂಗಿನ ಕಾಯಿ ಯಾವ ಮರದ್ದು ಆಗಿರಬೇಕು. ಮರದ ಲಕ್ಷಣ ಹೇಗಿರಬೇಕು ಎಂಬಿತ್ಯಾದಿ ನಿಯಮಗಳು ಇವೆ. ಆ ನಿಯಮಕ್ಕನುಗುಣವಾಗಿ ಬೀಜದ ಕಾಯಿಯನ್ನು ಆರಿಸಬೇಕು. ಯಾವುದೇ ನಿರ್ಲಕ್ಷ ಮಾಡಬಾರದು. ತೆಂಗಿನ ಮರದಿಂದ ಕಾಯಿಯನ್ನು ಬೀಜಕ್ಕಾಗಿ ತೆಗೆಯುವಾಗ ಎತ್ತರದ ಮರಗಳಿಂದ ಕೆಳಕ್ಕೆ ಬೀಳಿಸುವಾಗ ಆ ಕಾಯಿಯ ಭ್ರೂಣಕ್ಕೆ ಹೊಡೆತ ಉಂಟಾಗಬಹುದು. ಇದನ ಇದನ್ನು ಬೀಜಕ್ಕೆ ಇಟ್ಟಾಗ ಅದರಲ್ಲಿ ವೈಪರೀತ್ಯಗಳು ಉಂಟಾಗುವ ಸಾಧ್ಯತೆ ಇದೆ. ಆದ ಕಾರಣ ಬೀಜದ ಕಾಯಿಯನ್ನು ಎತ್ತರದಿಂದ ಕೆಳಕ್ಕೆ ಹಾಕದೆ ಇಳಿಸಬೇಕು.

## ಪ್ರಾಕೃತಿಕವಾಗಿ ಆಗುವ ಘಾಸಿ

- ತೆಂಗಿನ ಮರದಲ್ಲಿ ಸಾಮಾನ್ಯವಾಗಿ ಕೃತಕ ಪರಾಗಸ್ಪರ್ಶದ ಮೂಲಕ ಕಾಯಿ ಕಚ್ಚುತ್ತದೆ.
- ಪರಾಗ ಕಣಗಳು ಆಯಾ ಕ್ರೋಮೋಸೋಮಿನ ವರ್ಗಕ್ಕೆ ಮಾತ್ರ ಹೊಂದಿಕೆಯಾಗುವುದಾದರೂ ಕೆಲವೊಮ್ಮೆ ಪರಾಗ ಕಣಗಳಲ್ಲಿ ಏನಾದರೂ ಸೂಕ್ಷ್ಮ ದೋಷಗಳಿದ್ದು ಅವುಗಳಿಂದ ಪರಾಗ ಸ್ಪರ್ಶ ಕ್ರಿಯೆ ನಡೆದರೆ ಅದರಿಂದ ಫಲಿಸಿದ ಕಾಯಿಗೆ ಆ ಗುಣ ವರ್ಗಾವಣೆಯಾಗಿ ಅದು ಸಸಿಯಾಗಿ ಮರವಾದಾಗ ಅದರ ನ್ಯೂನತೆಯು ಬೆಳವಣಿಗೆ ಅಥವಾ ಇನ್ಯಾವುದೇ ರೀತಿಯಲ್ಲಿ ತೋರ್ಪಡಬಹುದು.
- ಕಾಯಿಯ ಮೂರು ಕಣ್ಣುಗಳಲ್ಲಿ ಒಂದು ಮೆದು ಕಣ್ಣಾಗಿದ್ದು ಅದರ ಒಳಗೆ ಒಂದು ಅಕ್ಕಿಯ ತರಹ ಇರುವ ಭಾಗವೇ ಭ್ರೂಣ.
- ಈ ಭ್ರೂಣಕ್ಕೆ ಕಾಯಿಯ ಎಲ್ಲಾ ಮಾತೃ ಗುಣವೂ ಸೇರಿರುತ್ತದೆ.
- ಈ ಭ್ರೂಣವೇ ಬೆಳೆದು ಸಸಿಯಾಗುವ ಅಂಗವಾಗಿರುತ್ತದೆ.
- ಕೆಲವೊಂದು ಹವಾಮಾನ ವೈಪರೀತ್ಯಗಳಾದ ವಿಪರೀತ ಚಳಿ, ಮುಂತಾದವುಗಳ ಕಾರಣದಲ್ಲೂ ಭ್ರೂಣಕ್ಕೆ ಘಾಸಿ ಉಂಟಾಗುತ್ತದೆ.

ಮರದ ಬೆಳವಣಿಗೆಯ ಮಧ್ಯಂತರದಲ್ಲಿ ಕೆಲವು ನ್ಯೂನ್ಯತೆಗಳು ಉಂಟಾಗುತ್ತವೆ. ಇದಕ್ಕೆ ಸಹ ನಮ್ಮ ಕೆಲವು ಕೆಲಸ ಕಾರ್ಯಗಳು ಮತ್ತು ಕೆಲವು ಕೀಟ - ರೋಗದ ಸಮಸ್ಯೆಯು ಕಾರಣವಾಗುತ್ತದೆ. ತೆಂಗಿನ ಮರದಲ್ಲಿ ಒಂದೇ ಒಂದು ಮೊಳಕೆ ಇದ್ದು, ಅದು ಶಿರ ಭಾಗದ ಸುಳಿಯ ಎಡೆಯಲ್ಲಿ ಇರುತ್ತದೆ. ಯಾವುದಾದರೂ ಕೃಷಿ ಕೆಲಸ ಮಾಡುವ ಸಂದರ್ಭದಲ್ಲಿ ಮರದ ಸುಳಿ ಭಾಗಕ್ಕೆ ಯಾವುದಾದರೂ ಮರದ ಗೆಲ್ಲುಗಳು ಬಿದ್ದು ಘಾಸಿ ಉಂಟಾದರೆ ಅಂತಹ ಮರಗಳು ಚೇತರಿಸಿಕೊಳ್ಳಲು ಸುಮಾರು ಮೂರು ವರ್ಷ ಬೇಕಾಗುತ್ತದೆ. ಈ ಸಮಯದಲ್ಲಿ ಕೆಲವೊಮ್ಮೆ ಮೊಳಕೆ ಭಾಗಕ್ಕೆ ಏನಾದರೂ ಶಾಕ್ ತರಹದ ಅನುಭವಾದಲ್ಲಿ ಆ ಮರದ ಇಳುವರಿ . ಕ್ಷಮತೆ ಕುಗ್ಗಬಹುದು, ಶಿರಭಾಗ ಸಣಕಲಾಗಲೂಬಹುದು.

ಕೆಲವು ಕೀಟಗಳು ಶಿರಭಾಗದ ಮೆದು ಅಂಗಾಂಶಕ್ಕೆ ಹಾನಿ ಮಾಡಿ. ಅದನ್ನು ನಿರ್ವಹಣೆ ಮಾಡಿ ಸರಿಪಡಿಸಿದಾಗ ಕೆಲವೊಮ್ಮೆ ಮರದ ಮೊಳಕೆ ಭಾಗಕ್ಕೆ ಸ್ವಲ್ಪ ಮಟ್ಟಿಗೆ ತೊಂದರೆ ಉಂಟಾಗಿ ಆ ಮರದಲ್ಲಿ ನಂತರ ಇಳುವರಿ ಕ್ಷಮತೆ ಕಡಿಮೆಯಾಗಲೂಬಹುದು. ಮುಖ್ಯವಾಗಿ ಕೆಂಪು ಮೂತಿ ಹುಳ, ಕುರುವಾಯಿ ಕೀಟ, ಕೋರಿಡ್ ಬಗ್ ಮುಂತಾದ ಕೀಟಗಳಿಂದ ಹೀಗಾಗುತ್ತದೆ.

ತೆಂಗಿನ ಮರದಲ್ಲಿ ಪೊಳ್ಳು ಕಾಯಿಗಳೇ ಬಿಡುತ್ತಿದ್ದರೆ ಆ ಮರಕ್ಕೆ ಪೊಟಾಶಿಯಂ ಹಾಗೂ ಗಂಧಕ ಪೋಷಕಾಂಶಗಳನ್ನು ಕೊಟ್ಟು, ಮೂರು ವರ್ಷಗಳ ತನಕ ಇಳುವರಿಯನ್ನು ಗಮನಿಸಿರಿ. ಒಂದು ಮರದದಲ್ಲಿ ಸುಮಾರು 36 ತಿಂಗಳ ಹಿಂದೆ ಹೂ ಗೊಂಚಲು ಮೂಡಲು ಪ್ರಾರಂಭವಾಗುತ್ತದೆ. ಆ ಸಮಯದಿಂದ ಅದಕ್ಕೆ ದೊರೆಯುವ ಪೋಷಕಗಳ ಮೇಲೆ ಅದರಲ್ಲಿ ಉಳಿಯುವ ಕಾಯಿಗಳು ಮತ್ತು ಉದುರುವ ಕಾಯಿಗಳ ಪ್ರಮಾಣ ಸುಮಾರಾಗಿ ನಿರ್ಧರಿತವಾಗಿರುತ್ತದೆ. 36 ತಿಂಗಳ ಹಿಂದೆ ಕೊಡಮಾಡಲ್ಪಟ್ಟ ಪೋಷಕಗಳ ಫಲಿತಾಂಶ ಈಗ ದೊರೆಯುತ್ತದೆ ಆದ ಕಾರಣ ಕಳೆದ ವರ್ಷ ಗೊಬ್ಬರ ಯಥೇಚ್ಛವಾಗಿ ಕೊಟ್ಟಿದ್ದೇನೆ ಎಂದು ಈ ವರ್ಷವೇ ಫಸಲಿನ ನಿರೀಕ್ಷೆ ಬೇಡ. ಯಾವುದೇ ಪೋಷಕಗಳ ನ್ಯೂನತೆ ಸರಿಪಡಿಸಿ ಅದರ ಫಲಿತಾಂಶ ದೊರೆಯಲು ಕನಿಷ್ಟ 36 ತಿಂಗಳು ಕಾಯಬೇಕು.



ತೆಂಗಿನ ಮರಕ್ಕೂ ಬೇರು ತಿನ್ನುವ ಹುಳದ ಉಪಟಳ ಇರುತ್ತದೆ. ಈ ಬೇರು ತಿನ್ನುವ ಹುಳುವಿನ ತೊಂದರೆ ಇದ್ದಲ್ಲಿ ಮರದಲ್ಲಿ ಎಷ್ಟೇ ಪೋಷಕಾಂಶಗಳ ನಿರ್ವಹಣೆ ಮಾಡಿದಾಗ್ಯೂ ಅಧಿಕ ಸಂಖ್ಯೆಯಲ್ಲಿ ಗರಿಗಳು ಇರುವುದಿಲ್ಲ. ಶಿರದ ಆಕಾರ ವಿರುದ್ಧ ಮಡಚಿದ ಛತ್ರಿಯಂತಿರುತ್ತದೆ. ಎಲೆಗಳು ತಿಳಿ ಹಸುರು ಬಣ್ಣದಲ್ಲಿರುತ್ತದೆ. ಇಂತಹ ಮರಗಳಲ್ಲಿ ಕಾಯಿ ಉದುರುವಿಕೆ, ಕೃಶ ಹೂಗೊಂಚಲು ಇರುತ್ತದೆ. ಇಂತಹ ಮರಗಳ ಕಾಂಡವೂ ಸಹ ವರ್ಷ ವರ್ಷ ಕಳೆದಂತೆ ಸಪುರವಾಗುತ್ತಾ ಬರುತ್ತದೆ. ಬೇರು ಹುಳದ ನಿವಾರಣೆಗೆ ಸೂಕ್ತ ಕ್ರಮ ಕೈಗೊಂಡ ತರುವಾಯ ಸುಮಾರು 36 ತಿಂಗಳ ನಂತರ ಆ ಮರ ಸಹಜ ಬೆಳವಣಿಗೆಯನ್ನು ಹೊಂದಬಹುದು.

ಯಾವುದೇ ಕಾರಣಕ್ಕೆ ವಕ್ರ ವಕ್ರವಾಗಿ, ಸುರುಳಿ ಸುರುಳಿಯಾಗಿ ಬೆಳೆಯುವ ಮರಗಳು ನಾಳೆ ನಾಡಿದ್ದು ಸರಿಯಾಗುತ್ತದೆ ಎಂದು ಕಾಯುತ್ತಾ ಕುಳಿತು ಕೊಳ್ಳಬೇಡಿ. ಅದು ಅದರ ಶಾರೀರಿಕ ನ್ಯೂನತೆಯಾಗಿದ್ದು, ಅದು ಅದು ಎಂದಿಗೂ ಸರಿಯಾಗಲಾರದು. ಸರಿಯಾಗುವ ಸಾಧ್ಯತೆ ಇರುವ ಮರಗಳ ಲಕ್ಷಣ ಅದು ಸಹಜ ಬೆಳವಣಿಗೆಯನ್ನು ಹೊಂದಿದ್ದು, ಯಾವುದೋ ಪೋಷಕಗಳ ಅಸಮತೋಲನದಿಂದ ಹೀಗಾಗುತ್ತದೆ. ಆ ಪೋಷಕಾಂಶಗಳನ್ನು ಹೆಚ್ಚುವರಿಯಾಗಿ ಕೊಟ್ಟು, ಮೂರು ವರ್ಷ ಕಾಲ ಕಾದು ನಂತರ ಸುಧಾರಿಸದಿದ್ದಲ್ಲಿ ಅದನ್ನು ತೆಗೆದು ಬೇರೆ ಸಸಿ ನಾಟಿ ಮಾಡಿ.

ಈ ತೊಂದರೆಗಳಿಗೆ ಯಾರೂ ಕಾರಣವಲ್ಲ. ಇದು ಮಿನಿಮಮ್ ಲಾಸ್‌ನಲ್ಲಿ ಬರುವ ಸಮಸ್ಯೆಯಾಗಿದ್ದು, ಇಂತದ್ದು ಗುರುತಿಸಿ ತಕ್ಷಣ ತೆಗೆದು ಬೇರೆ ಸಸಿ ನಾಟಿ ಮಾಡುವುದರಿಂದ ನಷ್ಟವನ್ನು ಕಡಿಮೆ ಮಾಡಿಕೊಳ್ಳಬಹುದು. ಒಂದು ಬೀಜದ ಗಿಡದಲ್ಲಿ ಎರಡು ಮೂರು ಸಸಿಗಳು ಬೆಳೆದು ಒಂದು ಉತ್ತಮ ಉಳಿದದ್ದು ಕೃಷ್ಣ ಬೆಳವಣಿಗೆಯನ್ನು ಹೊಂದಿತ್ತೆಂದಾದರೆ ಅಂತಹ ಬುಡದಲ್ಲಿ ಆರೋಗ್ಯವಾಗಿರುವ ಒಂದನ್ನೇ ಉಳಿಸಿಕೊಂಡು ಬೇರೆ ಸಸಿಗಳನ್ನು ಕಡಿದು ತೆಗೆಯಬಹುದು. ಆ ಸಮಯದಲ್ಲಿ ಮುಖ್ಯ ಸಸಿಗೆ ಗಾಯ ಆಗ ಕೂಡದು. ಒಂದು ವೇಳೆ ಎರಡೂ ಏಕ ಪ್ರಕಾರ ಬೆಳವಣಿಗೆ ಹೊಂದಿದ್ದರೆ ಅಂಥಹ ಸಸಿಗಳಲ್ಲಿ ಎರಡನ್ನೂ ಉಳಿಸಿಕೊಂಡು ಹೆಚ್ಚುವರಿ ಗೊಬ್ಬರ ಕೊಟ್ಟು ಸಾಕಬಹುದು.

ತೆಂಗು ಬೆಳೆಗಾರರು ಅನುತ್ಪಾದಕ ಮರಗಳನ್ನು ಉಳಿಸಿಕೊಂಡು ಅದು ಇಂದು ಸರಿಯಾಗುತ್ತದೆ. ನಾಳೆ ಸರಿಯಾಗುತ್ತದೆ ಎಂದು ಕಾದು ನೋಡುವುದು ಸರಿಯಲ್ಲ. ಎಲ್ಲಾ ಬೆಳೆಗಳಲ್ಲೂ ಇರುವಂತೆ ತೆಂಗಿನಲ್ಲೂ ಕೆಲವು ಅನುತ್ಪಾದಕ ಮರಗಳು ಇರುವುದು ಸಹಜ. ಅದನ್ನು ಗುರುತಿಸಿದ ಮೇಲೆ ತೆಗೆಯುವುದು ಉತ್ತಮ.

**- ರಾಧಾಕೃಷ್ಣ** ಹೊಳ್ಳ

# ಮಕ್ಕಳಲ್ಲಿ ಶಿಸ್ತು, ದೇಶಪ್ರೇಮ ಬೆಳೆಸುವುದೇ ಶಿಕ್ಷಣ

## ಸ್ಕೌಟ್ಸ್ ಗೈಡ್ಸ್ ಮೂಲಕ ಮಕ್ಕಳಲ್ಲಿ ಉತ್ತಮ ವ್ಯಕ್ತಿತ್ವ ಬೆಳೆಸಬೇಕು: ಡಾ.ಪಿ.ಜಿ.ಆರ್.ಸಿಂಧ್ಯ

• ಪ್ರಜೋದಯ ವರದಿ

**ಬೇಲೂರು:** ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕದ ಜ್ಞಾನವನ್ನು ನೀಡುವುದಲ್ಲ. ಮಕ್ಕಳಲ್ಲಿ ಶಿಸ್ತು, ಸಮಯ ಪಾಲನೆ, ಸೇವಾ ಮನೋಭಾವ, ನಾಯಕತ್ವ, ಧೈರ್ಯ, ದೇಶಪ್ರೇಮ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವುದೂ ಶಿಕ್ಷಣದ ಪ್ರಮುಖ ಭಾಗವಾಗಿದೆ ಎಂದು ಮಾಜಿ ಸಚಿವರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮುಖ್ಯ ಆಯುಕ್ತ ಡಾ.ಪಿ.ಜಿ.ಆರ್.ಸಿಂಧ್ಯ ಅವರು ಹೇಳಿದರು.

ಬೇಲೂರಿನ ಯುರೋ ಕಿಡ್ಸ್ ವಿದ್ಯಾ ವಿಕಾಸ ಪಬ್ಲಿಕ್ ಶಾಲಾ ಆವರಣದಲ್ಲಿ ಮಂಗಳವಾರ ನಡೆದ ಕಬ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ದಳದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 16 ವರ್ಷಗಳ ಹಿಂದೆ ಕೇವಲ 70 ಮಕ್ಕಳಿಂದ ಆರಂಭವಾದ ಶಿಕ್ಷಣ ಸಂಸ್ಥೆ ಇಂದು ಸುಮಾರು ಏಳುನೂರು ಮಕ್ಕಳಿಗೆ ಶಿಕ್ಷಣ ನೀಡುವ ಮಟ್ಟಕ್ಕೆ ಬೆಳೆದಿರುವುದು ಹೆಮ್ಮೆಯ ಸಂಗತಿ. ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕರ ಪರಿಶ್ರಮದಿಂದ ಶಾಲೆ ಉತ್ತಮವಾಗಿ ಬೆಳೆಯುತ್ತಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಉತ್ತಮ ಸಾಧನೆ ಮಾಡಿರುವುದು ಅಭಿನಂದನಾರ್ಹವಾಗಿದೆ ಎಂದರು.

ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಲ್ಲಿ ಜೀವನ ಕೌಶಲ್ಯ, ಶಿಸ್ತು, ಸೇವಾ ಮನೋಭಾವ, ನಾಯಕತ್ವ ಹಾಗೂ ಉತ್ತಮ ನಾಗರಿಕ ಗುಣಗಳನ್ನು ಬೆಳೆಸುವ ಅತ್ಯುತ್ತಮ ವೇದಿಕೆಯಾಗಿದೆ. ರಾಜ್ಯದಲ್ಲಿ ಸುಮಾರು 8.50 ಲಕ್ಷ ಮಕ್ಕಳು ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಸಂಘಟನೆಯ ವ್ಯಾಪಕತೆಯನ್ನು ತೋರಿಸುತ್ತದೆ. ಸಂಘಟನೆಯ ಸದಸ್ಯತ್ವಕ್ಕಿಂತ ಅದರ ವಿಚಾರ, ತತ್ವ, ಶಿಸ್ತು ಮತ್ತು ಸೇವಾ ಮನೋಭಾವವನ್ನು ಮಕ್ಕಳಿಗೆ ತಲುಪಿಸುವುದು ಮುಖ್ಯ ಎಂದು ತಿಳಿಸಿದರು.

ಮ್ಯಾನೇಜಿಂಗ್ ಟ್ರಸ್ಟಿ ಬಿ.ಎಂ. ರಂಗನಾಥ್ ಮಾತನಾಡಿ, ಶಿಕ್ಷಣದ ಜೊತೆಗೆ ಮಕ್ಕಳಿಗೆ ಶಿಸ್ತು, ಸಂಸ್ಕಾರ, ಸೇವಾ ಮನೋಭಾವ ಮತ್ತು ಉತ್ತಮ ಜೀವನ ಮೌಲ್ಯಗಳನ್ನು ನೀಡುವ ಉದ್ದೇಶದಿಂದ ಶಾಲೆಯ ಮಕ್ಕಳನ್ನು ಸ್ಕೌಟ್ಸ್ ಮತ್ತು ಗೈಡ್ಸ್



ಚಟುವಟಿಕೆಗಳಲ್ಲಿ ತೊಡಗಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿದ್ಯಾರ್ಥಿಗಳನ್ನು ಈ ಚಟುವಟಿಕೆಗಳಿಗೆ ಸೇರ್ಪಡೆಗೊಳಿಸಿ, ಅವರಲ್ಲಿ ನಾಯಕತ್ವ ಹಾಗೂ ಸಾಮಾಜಿಕ ಜವಾಬ್ದಾರಿಯ ಗುಣಗಳನ್ನು ಬೆಳೆಸಲು ಆದ್ಯತೆ ನೀಡಲಾಗುವುದು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ ಮಾತನಾಡಿ, ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಪೂರಕವಾಗಿವೆ. ಶಾಲಾ ಶಿಕ್ಷಣದೊಂದಿಗೆ ಶಿಸ್ತು, ಸೇವೆ ಮತ್ತು ಸಮಾಜದ ಬಗ್ಗೆ ಜವಾಬ್ದಾರಿಯ ಮನೋಭಾವ ಬೆಳೆಸುವಲ್ಲಿ ಇಂತಹ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಎಲ್ಲ ಶಾಲೆಗಳಲ್ಲೂ ಇಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ. ಶಿವರಾಜು ಮಾತನಾಡಿ, ಶಿಕ್ಷಣ ಎಂದರೆ ಕೇವಲ ಅಂಕಗಳನ್ನು ಗಳಿಸುವುದಲ್ಲ. ಶಿಸ್ತು, ಸಮಯಪಾಲನೆ, ಸೇವಾ ಮನೋಭಾವ, ನಾಯಕತ್ವ, ಧೈರ್ಯ, ದೇಶಪ್ರೇಮ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವುದೇ ನಿಜವಾದ ಶಿಕ್ಷಣ. ಈ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಇಂದಿನ ಮಕ್ಕಳು ನಾಳೆಯ ದೇಶದ ಭವಿಷ್ಯ. ಆದ್ದರಿಂದ ವಿದ್ಯಾಭ್ಯಾಸದ ಜೊತೆಗೆ ಸಮಾಜ ಸೇವೆ, ಪರಿಸರ ಸಂರಕ್ಷಣೆ, ಸ್ವಚ್ಛತೆ, ಪರಸ್ಪರ ಸಹಕಾರ ಹಾಗೂ ಕಷ್ಟದಲ್ಲಿರುವವರಿಗೆ ನೆರವಾಗುವ ಗುಣಗಳನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ಸಂಘಟನಾ ಆಯುಕ್ತ ಪ್ರಭಾಕರ್ ಭಟ್, ಹಾಸನ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಸುರೇಶ್ ಗುರೂಜಿ, ನಿವೃತ್ತ ಶಿಕ್ಷಕರು ಹಾಗೂ ಬೇಲೂರು ತಾಲ್ಲೂಕಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಾಜಿ ಕಾರ್ಯದರ್ಶಿ ಪರಶುರಾಮ, ಅನ್ನಪೂರ್ಣ ಎಜುಕೇಶನಲ್ ಮತ್ತು ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಆಶಾ ರಂಗನಾಥ, ಆಡಳಿತಾಧಿಕಾರಿ ಹಾಗೂ ಟ್ರಸ್ಟಿ ಪದ್ಮಾ ಜಯಕುಮಾರ್ ಪಾಟೀಲ, ಯುರೋ ಕಿಡ್ಸ್ ಸಂಯೋಜಕಿ ಶಾಲಿನಿ ಕೇಶವ್, ಶಾಲೆಯ ಪ್ರಾಂಶುಪಾಲ ಬಾಲಾಜಿ, ಶಾಲೆಯ ಶಿಕ್ಷಕರು ಹಾಜರಿದ್ದರು.

# ಸಾರಿಗೆ ಬಸ್‌ಗಳ ನಿಲುಗಡೆಗೆ ಒತ್ತಾಯಿಸಿ ಪ್ರತಿಭಟನೆ

• ಪ್ರಜೋದಯ ವರದಿ





**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರ ಹೋಬಳಿ ಕಾನನ ಕೊಪ್ಪಲು ಗ್ರಾಮದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲುಗಡೆ ಮಾಡುತ್ತಿಲ್ಲವಾದ್ದರಿಂದ ದರ್ಶನ್ ಮತ್ತು ಪವನ್ ಅವರ ನೇತೃತ್ವದಲ್ಲಿ ಕಾನನಕೊಪ್ಪಲು ಹಾಗೂ ಗರುಡನಹಳ್ಳಿ ಗ್ರಾಮಸ್ಥರು ಹಾಗೂ ಶಾಲಾ- ಕಾಲೇಜು ವಿದ್ಯಾರ್ಥಿಗಳು ಶಾಂತಿಯುತ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರತಿಭಟನಾಕಾರರು, ಕಾನನಕೊಪ್ಪಲು ಗ್ರಾಮದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲುಗಡೆ ಮಾಡದಿರುವುದರಿಂದ ಗ್ರಾಮಸ್ಥರು ಹಲವು ತಿಂಗಳುಗಳಿಂದ ಸಾರಿಗೆ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು ಹಾಗೂ ಸಾರ್ವಜನಿಕರು ದಿನನಿತ್ಯದ ಪ್ರಯಾಣಕ್ಕಾಗಿ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಗ್ರಾಮಸ್ಥರು ಈಗಾಗಲೇ ಸಂಬಧಪಟ್ಟ ಕೆಎಸ್‌ಆರ್‌ಟಿಸಿ ಡಿಪೋ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಗಮನಕ್ಕೆ ಹಲವು ಬಾರಿ ತಂದಿದ್ದರೂ, ಸಮಸ್ಯೆಗೆ ಶಾಶ್ವತ ಪರಿಹಾರ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಕಾನನ ಕೊಪ್ಪಲು ಗ್ರಾಮದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ನಿಯಮಿತವಾಗಿ ನಿಲ್ಲಿಸಬೇಕು. ಗ್ರಾಮದಲ್ಲಿ ಬಸ್ ನಿಲುಗಡೆಗೆ ಅಧಿಕೃತವಾಗಿ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕೆ.ಎಸ್.ಆರ್.ಟಿ.ಸಿ. ಮಿಷನ್/ಸಿಸ್ಟಂನಲ್ಲಿ ಕಾನನ ಕೊಪ್ಪಲು ಗ್ರಾಮದ ಹೆಸರನ್ನು ಅಧಿಕೃತ ಬಸ್ ನಿಲಗಡೆ ಆಗಿ ಸೇರಿಸಬೇಕು. ಸಂಬಧಪಟ್ಟ ಚಾಲಕರು ಮತ್ತು ನಿರ್ವಾಹಕರಿಗೆ ಗ್ರಾಮದಲ್ಲಿ ಬಸ್ ನಿಲ್ಲಿಸುವಂತೆ ಸ್ಪಷ್ಟ ಸೂಚನೆ ನೀಡಬೇಕು. ಗ್ರಾಮಸ್ಥರ ಸಾರಿಗೆ ಹಕ್ಕಿಗಾಗಿ ಶಾಂತಿಯುತ ಹೋರಾಟ ಸಮಸ್ಯೆ ಬಗೆಹರಿಯುವವರೆಗೆ ನಮ್ಮ ಪ್ರತಿಭಟನೆ ಮುಂದುವರಿಯುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯ ನಂತರ ರಾಮನಾಥಪುರ ಹಾಗೂ ಅರಕಲಗೂಡು ಡಿಪೋ ಮ್ಯಾನೇಜರ್‌ಗಳಿಗೆ ಮನವಿ ಸಲ್ಲಿಸಿ ಮನವಿ ಮಾಡಿದರು.

ಪ್ರತಿಭಟನೆ ಸಂದರ್ಭದಲ್ಲಿ ಕೊಣನೂರು ಪೊಲೀಸರು ಬಿಗಿಭದ್ರತೆ ಕೈಗೊಂಡಿದ್ದರು. ಪ್ರತಿಭಟನಾ ಸ್ಥಳಕ್ಕೆ ಅರಕಲಗೂಡು ಹಾಗೂ ರಾಮನಾಥಪುರ ಡಿಪೋ ಮ್ಯಾನೇಜರ್ ಆಗಮಿಸಿ ಪ್ರತಿಭಟನಾ ನಿರತರ ಮನವಿಯನ್ನು ಆಲಿಸಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆದರು.

# ಕಕ್ಷಿದಾರರಿಗೆ ತ್ವರಿತಗತಿಯಲ್ಲಿ ನ್ಯಾಯ

• ಪ್ರಜೋದಯ ವರದಿ

**ಆಲೂರು:** ಜನಸಾಮಾನ್ಯರಿಗೆ ತ್ವರತಗತಿಯಲ್ಲಿ ನ್ಯಾಯ ಒದಗಿಸಬೇಕು ಎಂಬ ಮೂಲ ಉದ್ದೇಶದಿಂದ ಆಲೂರಿನಲ್ಲಿ ಉಪ ವಿಭಾಗಾಧಿಕಾರಿ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ ಎಂದು ಉಪ ವಿಭಾಗಾಧಿಕಾರಿ ಹುಲುಮನಿ ತಿಮ್ಮಣ್ಣ ಅವರು ತಿಳಿಸಿದರು.

ಪಟ್ಟಣದ ಮಿನಿ ವಿದಾನಸೌಧದಲ್ಲಿ ನೂತನ ಉಪ ವಿಭಾಗಾಧಿಕಾರಿ ನ್ಯಾಯಾಲಯ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ತಾಲ್ಲೂಕು ಹಾಸನ ಮತ್ತು ಕೊಡಗು ಜಿಲ್ಲೆ ಗಡಿವರೆಗೆ ತನ್ನ ವ್ಯಾಪ್ತಿ ಹೊಂದಿದೆ. ನ್ಯಾಯ ಅರಸಿ ಬರುವ ಕಕ್ಷಿದಾರರು ಆಲೂರು ತಾಲ್ಲೂಕಿನಿಂದ ಸಕಲೇಶಪುರಕ್ಕೆ ಬಂದು ಹೋಗಲು ಅತಿಯಾದ ಸಮಯ ವ್ಯರ್ಥವಾಗುತ್ತಿತ್ತು. ಕಕ್ಷಿದಾರರ ಸಂಕಷ್ಟ ಅರಿಯಲಾಗಿದ್ದು, ತ್ವರಿತಗತಿಯಲ್ಲಿ ನ್ಯಾಯ ಒದಗಿಸಬೇಕು ಎಂಬ ಮೂಲ ಉದ್ದೇಶದಿಂದ ಪ್ರತಿ ಮಂಗಳವಾರ ಆಲೂರು ಮಿನಿ ವಿದಾನಸೌಧದಲ್ಲಿ



ನ್ಯಾಯಾಲಯ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದರು.

ಸಕಲೇಶಪುರ ಉಪ ವಿಭಾಗಾಧಿಕಾರಿಗಳು ಈಗಾಗಲೆ ಸಕಲೇಶಪುರ, ಬೇಲೂರು, ಅರಕಲಗೂಡು ತಾಲ್ಲೂಕುಗಳಲ್ಲಿ ನ್ಯಾಯಾಲಯ ನಡೆಸುತ್ತಿದ್ದಾರೆ. ಆಲೂರಿನಲ್ಲಿ ಪ್ರಾರಂಭ ಮಾಡಿರುವುದರಿಂದ ಕಕ್ಷಿದಾರರಿಗೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

ತಹಸೀಲ್ದಾರ್ ಎಚ್.ಮಲ್ಲಿಕಾರ್ಜುನ ಅವರು ಮಾತನಾಡಿ, ಮೇಲಾಧಿಕಾರಿಗಳು ವಾರಕ್ಕೊಮ್ಮೆ ತಾಲ್ಲೂಕು ಕಚೇರಿಗೆ ಬಂದು ಹೋಗುವುದರಿಂದ ಕಚೇರಿ ಸಿಬ್ಬಂದಿಗಳು ಸಹ ಸಾರ್ವಜನಿಕರ ಕೆಲಸಗಳನ್ನು ಪೂರೈಸಲು ಹೆಚ್ಚು ಒತ್ತು ನೀಡುತ್ತಾರೆ ಎಂಬ ಆತ್ಮವಿಶ್ವಾಸವಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಸಕಲೇಶಪುರ ತಹಸೀಲ್ದಾರ್ ಸುಪ್ರೀತ, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಎಸ್. ಮಹೇಶ್ ಮಾತನಾಡಿದರು. ಕಾರ್ಯದರ್ಶಿ ಆರ್.ಬಿ.ಸುರೇಶ್, ತಾಲ್ಲೂಕು ವಕೀಲರ ಸಂಘದ ಎಲ್ಲ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಉಚಿತ ಮಾಸಿಕ ಕಿರು ಆರೋಗ್ಯ ತಪಾಸಣೆ

**ಹಾಸನ:** ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ ಹಾಸನದ ಕಟ್ಟಡದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಉಚಿತ ಕಿರು ಆರೋಗ್ಯ ತಪಾಸಣಾ ಶಿಬಿರವನ್ನು ಆ.29 ರಂದು ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ, ಡಾ. ರಾಘವೇಂದ್ರ ಪ್ರಸಾದ್ ಅವರಿಂದ ಕಿವಿ, ಮೂಗು, ಗಂಟಲು ತಪಾಸಣೆ, ಡಾ.ಕೆ ಶಂಕರ್ - ಕೀಲು ಮತ್ತು ಮೂಳೆರೋಗ ತಪಾಸಣೆ, ಸ್ತ್ರಿರೋಗ ತಜ್ಞರಾದ ಡಾ.ಸಾವಿತ್ರಿ -ಮಹಿಳೆಯರ ಆರೋಗ್ಯ ತಪಾಸಣೆ, ಡಾ.ಉಮಾ ಅವರಿಂದ ಚರ್ಮರೋಗ ತಪಾಸಣೆ, ಡಾ.ಚಂದ್ರಶೇಖರ್, ರಾಜೀವ್ ಆಯುರ್ವೇದ ಆಸ್ಪತ್ರೆ ಮತ್ತು ವಿಜ್ಞಾನಗಳ ಸಂಸ್ಥೆ ವತಿಯಿಂದ ಆಯುರ್ವೇದ ವೈದ್ಯಕೀಯ ತಪಾಸಣೆ ಮತ್ತು ಸಲಹೆ, ಡಾ.ವೈಭವ್ ರವರಿಂದ ದಂತ ತಪಾಸಣೆ, ಡಾ. ಮಹಿತಾ (ಫಿಜಿಷಿಯನ್) ಅವರಿಂದ ಸಾಮಾನ್ಯ ಕಾಯಿಲೆಗಳ ತಪಾಸಣೆ, ಥೈರೋಕೇರ್ ಲ್ಯಾಬ್ ವತಿಯಿಂದ ಮೂಳೆ ಸಾಂದ್ರತೆ ಮತ್ತು ಥೈರಾಯ್ಡ್ ತಪಾಸಣೆ ಹಾಗೂ ಅರ್ರಾಲ್ ಕಣ್ಣಿನ ಆಸ್ಪತ್ರೆ ವತಿಯಿಂದ ನೇತ್ರ ತಪಾಸಣೆ ನಡೆಯಲಿದೆ.

# ಅಪಘಾತದ ವೇಳೆ ಜೀವ ಉಳಿಸಲು ಮುಂದಾಗಿ

## ಗಾಯಾಳುವಿನ ವಿಡಿಯೋ ಮಾಡುವ ಬದಲು ಆಸ್ಪತ್ರೆಗೆ ದಾಖಲಿಸಿ: ಎಚ್.ಎಂ. ರೇವಣ್ಣ

• ಪ್ರಜೋದಯ ವರದಿ

**ಬೇಲೂರು:** ಅಪಘಾತ ಸೇರಿದಂತೆ ತುರ್ತು ಪರಿಸ್ಥಿತಿಯಲ್ಲಿ ಗಾಯಾಳುಗಳ ವಿಡಿಯೋ ಮಾಡುವ ಬದಲು ತಕ್ಷಣ ನೆರವಿಗೆ ಧಾವಿಸಿ ಜೀವ ಉಳಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಬೇಲೂರು ವೃತ್ತ ನಿರೀಕ್ಷಕ ಎಚ್.ಎಂ. ರೇವಣ್ಣ ಅವರು ಕರೆ ನೀಡಿದರು.

ನಗರದ ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಸಮೀಪದ ಮಾತೃಶ್ರೀ ಕಲ್ಯಾಣಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ಸ್ವಯಂ ಸೇವಕರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಅಪಘಾತ ಸಂಭವಿಸಿದ ತಕ್ಷಣ 108 ಆಂಬ್ಯುಲೆನ್ಸ್ ಹಾಗೂ 112 ತುರ್ತು ಸೇವೆಗೆ ಕರೆ ಮಾಡಿ, ಗಾಯಾಳುವನ್ನು ಸಾಧ್ಯವಾದಷ್ಟು ಬೇಗ ಆಸ್ಪತ್ರೆಗೆ ದಾಖಲಿಸಬೇಕು. ಬೇರೆಯವರು ಸಹಾಯ ಮಾಡಲಿ ಎಂದು ಕಾಯದೆ



ವಾಹನ ಹೊಂದಿರುವವರು ಕೂಡ ಮೊದಲ ಸ್ಪಂದಕರಾಗಿ ನೆರವಿಗೆ ಧಾವಿಸಬೇಕು. ಶತ್ರುವೇ ಆಗಿದ್ದರೂ ಅಪಘಾತದ ಸಂದರ್ಭದಲ್ಲಿ ಮೊದಲು ಜೀವ ಉಳಿಸುವುದೇ ನಮ್ಮ ಕರ್ತವ್ಯ. ಮನುಷ್ಯನ ಜೀವಕ್ಕೆ ಬೆಲೆ ಕಟ್ಟಲಾಗದು ಎಂದರು.

ತರಬೇತಿ ಕೇವಲ ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತವಾಗದೆ, ಸ್ವಯಂಸೇವಕರು ಕಲಿತ ಜ್ಞಾನವನ್ನು ತಮ್ಮ ಗ್ರಾಮಗಳಲ್ಲೂ ಹಂಚಬೇಕು. ಒಬ್ಬರು ನಾಲ್ವರಿಗೆ, ನಾಲ್ವರು ಮತ್ತಷ್ಟು ಜನರಿಗೆ ತಿಳಿಸುವ ಮೂಲಕ ತುರ್ತು ಪರಿಸ್ಥಿತಿಯಲ್ಲಿ ಸ್ಪಂದಿಸುವ ಕುರಿತು ವ್ಯಾಪಕ ಜನಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಜನಜಾಗೃತಿ ಸಮಿತಿ ಅಧ್ಯಕ್ಷ ದಯಾನಂದ್ ಮಾತನಾಡಿ, ಪ್ರಕೃತಿ ವಿಕೋಪ, ಮಾನವ ನಿರ್ಮಿತ ವಿಕೋಪ ಹಾಗೂ ಅಪಘಾತ ಸೇರಿದಂತೆ ವಿವಿಧ ಸಂಕಷ್ಟದ ಸಂದರ್ಭಗಳಲ್ಲಿ ಸಿಲುಕುವವರಿಗೆ ತಕ್ಷಣ ನೆರವು ನೀಡುವ ಸಾಮರ್ಥ್ಯವನ್ನು ಸ್ವಯಂಸೇವಕರು ಬೆಳೆಸಿಕೊಳ್ಳಬೇಕು. ತರಬೇತಿಯಲ್ಲಿ ಪಡೆದ ಜ್ಞಾನವನ್ನು ಸಮಾಜದ ಒಳಿತಿಗೆ ಬಳಸಬೇಕು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಗ್ರಾಮೀಣ ಜನರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯೊಂದಿಗೆ ಸ್ವಯಂ ಸೇವಾ ಮನೋಭಾವ ಬೆಳೆಸುವ ಜನಪರ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಯೋಜನಾಧಿಕಾರಿ ಮಂಜುಳಾ, ಎನ್‌ಡಿಆರ್‌ಎಫ್ ಕಮಾಂಡರ್ ಶಾಂತಿಲಾಲ್ ಜಟಿಯಾ, ಅಧಿಕಾರಿಗಳಾದ ಪಾಟೀಲ್ ನಿವೇಶ್, ಅಲ್ವಿನ್ ಜಗದೀಶ್, ಮಾಲತೇಶ, ಜಿಲ್ಲಾ ನಿರ್ದೇಶಕರಾದ ರಂಗಸ್ವಾಮಿ, ದರಣೇಶ, ಎಸ್. ಕೆ.ನಾಗೇಶ್, ತರಬೇತಿದಾರರು, ಸ್ವಯಂ ಸೇವಕರು ಹಾಗೂ ವಿವಿಧ ಗಣ್ಯರು ಉಪಸ್ಥಿತರಿದ್ದರು.

# ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾ ಶಾಲೆ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟಕ್ಕೆ ಆಯ್ಕೆ



• ಪ್ರಜೋದಯ ವರದಿ

**ಹಾಸನ:** ಸಿ.ಐ.ಎಸ್.ಸಿ.ಇ. (CIS-CE), ನವದೆಹಲಿ, ಇವರು ಇತ್ತೀಚೆಗೆ ತುಮಕೂರಿನಲ್ಲಿ ಕರ್ನಾಟಕ ರಾಜ್ಯದ ಐ.ಸಿ.ಎಸ್.ಇ (ICSE) ಶಾಲೆಗಳಿಗಾಗಿ ಸಂಘಟಿಸಿದ್ದ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ನಗರದ ಎಸ್. ಆರ್.ಎಸ್ ಪ್ರಜ್ಞಾ ವಿದ್ಯಾ ಶಾಲೆಯ ವಿದ್ಯಾರ್ಥಿಗಳು ಅತ್ಯಮೋಘ ಪ್ರದರ್ಶನ ನೀಡುವ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ನೇ ತರಗತಿಯ ಹೆಚ್.ಡಿ.ಇಂಪನ ಹಾಗೂ 10ನೇ ತರಗತಿಯ ಆರ್. ಎಸ್.ರಿಷಿಕೇಶ್ ಇವರುಗಳು ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ಪಡೆಯುವ ಮೂಲಕ ರಾಷ್ಟ್ರ ಮಟ್ಟದ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ. ಇವರನ್ನು ಶಾಲೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಶುಭ ಕೋರಿದ್ದಾರೆ.

# ಸರ್ವರ್ ಸಮಸ್ಯೆ: ಪಡಿತರ ಪಡೆಯಲು ಪರದಾಟ

## ಒಂದು ವಾರದಿಂದ ಅಡಚಣೆ: ಗ್ರಾಹಕರಿಗೆ ತಪ್ಪದ ಕಾಯುವ ಸ್ಥಿತಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಪಡಿತರ ವಿತರಣಾ ವ್ಯವಸ್ಥೆಗೆ ಸರ್ವರ್ ಸಮಸ್ಯೆ ಎದುರಾಗಿರುವುದರಿಂದ ನ್ಯಾಯಬೆಲೆ ಅಂಗಡಿಗಳ ಮುಂದೆ ಬೆಳಗ್ಗಿನಿಂದಲೇ ಗ್ರಾಹಕರು ಸರದಿ ಸಾಲಿನಲ್ಲಿನಿಂತರೂ ಪಡಿತರ ಪಡೆಯಲಾಗದೆ ಪರದಾಡುವಂತಾಗಿದೆ.

ಸರ್ವರ್ ಯಾವಾಗ ಬರುತ್ತದೆ ಎಂಬ ಖಚಿತತೆ ಇಲ್ಲದಿರುವುದರಿಂದ ಐದಾರು ಗಂಟೆಗಳ ಕಾಲ ಅಂಗಡಿ ಎದುರು ಕಾಯುವುದು ಸಾಮಾನ್ಯವಾಗಿದೆ. ದಿನವಿಡೀ ಕಾದರೂ ಸರ್ವರ್ ಬಾರದ ಹಿನ್ನಲೆ ಕೆಲವರು ಪಡಿತರ ಪಡೆಯುವ ನಿರೀಕ್ಷೆಯಲ್ಲೇ ತಮ್ಮ ದಿನದ ಕೂಲಿಯನ್ನು ಕಳೆದುಕೊಳ್ಳುವಂತಾಗಿದೆ.

ಜಿಲ್ಲೆಯಲ್ಲಿ ಸುಮಾರು 850 ನ್ಯಾಯಬೆಲೆ ಅಂಗಡಿಗಳಿದ್ದು, ಬಹುತೇಕ ಕಡೆಗಳಲ್ಲಿ ಸರ್ವರ್ ಸಮಸ್ಯೆ ಎದುರಾಗಿದೆ ಎನ್ನಲಾಗಿದೆ. ಕಳೆದ ಒಂದು ವಾರದಿಂದ ಸಮಸ್ಯೆ ತೀವ್ರಗೊಂಡಿದ್ದು, ಪಡಿತರ ವಿತರಣೆಗೆ ಅಂಗಡಿ ಮಾಲೀಕರೂ ಪರದಾಡುವಂತಾಗಿದೆ. ಗ್ರಾಹಕರಿಗೆ ಪಡಿತರ



### ಜಿಲ್ಲೆಯಲ್ಲಿ 4.17 ಲಕ್ಷ ಬಿಪಿಎಲ್ ಕಾರ್ಡ್

ಜಿಲ್ಲೆಯಲ್ಲಿ 22,550 ಅಂತ್ಯೋದಯ ಅನ್ನ ಯೋಜನೆ ಕಾರ್ಡ್‌ಗಳಿದ್ದು, ಅವುಗಳಿಗೆ ಸಂಬಂಧಿಸಿದಂತೆ ಸುಮಾರು 92 ಸಾವಿರ ಮಂದಿ ಫಲಾನುಭವಿಗಳಿದ್ದಾರೆ. ಅಲ್ಲದೆ, ಸುಮಾರು 4.17 ಲಕ್ಷ ಬಿಪಿಎಲ್ ಕಾರ್ಡ್‌ಗಳ ಮೂಲಕ 13.72 ಲಕ್ಷ ಮಂದಿ ಪಡಿತರ ಸೌಲಭ್ಯ ಪಡೆಯುತ್ತಿದ್ದಾರೆ. ಇಷ್ಟೊಂದು ದೊಡ್ಡ ಸಂಖ್ಯೆಯ ಫಲಾನುಭವಿಗಳಿಗೆ ಪ್ರತಿ ತಿಂಗಳು ಪಡಿತರ ವಿತರಿಸಬೇಕಾಗಿರುವ ಸಂದರ್ಭದಲ್ಲಿ ಸರ್ವರ್ ಸಮಸ್ಯೆ ಜನರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ.

ವಿತರಿಸಲು ಸಿದ್ದರಾಗಿದ್ದರೂ ತಾಂತ್ರಿಕ ಸಮಸ್ಯೆಯಿಂದಾಗಿ ವಿತರಣೆ ಸಾಧ್ಯವಾಗುತ್ತಿಲ್ಲ ಎಂದು ನ್ಯಾಯಬೆಲೆ ಅಂಗಡಿ ಮಾಲೀಕರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಪಡಿತರ ಪಡೆಯಲು ಕೆಲಸ ಬಿಟ್ಟು ಬರುವ ಬಡ ಹಾಗು ಕೂಲಿ ಕಾರ್ಮಿಕರು, ವೃದ್ಧರು ಮತ್ತು ಮಹಿಳೆಯರು ದಿನವಿಡೀ ಅಂಗಡಿ ಮುಂದೆ ಕಾದು ನಿಲ್ಲಬೇಕಾದ ಸ್ಥಿತಿ ಎದುರಾಗಿದೆ. ಒಂದೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಯಬಹುದು ಎಂಬ ನಿರೀಕ್ಷೆಯಲ್ಲಿ ಕಾಯುತ್ತಿದ್ದರೂ ವಾರ ಕಳೆದರೂ ಸಮಸ್ಯೆ ಮುಂದುವರಿದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಸರ್ವರ್ ಸಮಸ್ಯೆಯ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಹಲವು ಬಾರಿ ತಂದಿದ್ದರೂ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಸರ್ಕಾರ ಬಡವರಿಗಾಗಿ ನೀಡುತ್ತಿರುವ ಪಡಿತರವನ್ನು ಪಡೆಯಲು ಬಡವರೇ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ.

ಪಡಿತರ ವಿತರಣೆಗೆ ನಿಗದಿತ ಅವಧಿ ಇರುವುದರಿಂದ ಸರ್ವರ್ ಸಮಸ್ಯೆಯನ್ನು ತಕ್ಷಣ ಪರಿಹರಿಸಿ, ಫಲಾನುಭವಿಗಳಿಗೆ ಯಾವುದೇ ತೊಂದರೆಯಾಗದಂತೆ ಪಡಿತರ ವಿತರಿಸಲು ಕ್ರಮ ಕೈಗೊಳ್ಳಬೇಕು. ವಯೋವೃದ್ಧರು, ಅಂಗವಿಕಲರು ಹಾಗೂ ಕೂಲಿ ಕಾರ್ಮಿಕರು ದಿನಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿಗೆ ಅಂತ್ಯ ಹಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ




• ಪ್ರಜೋದಯ ವರದಿ

**ಹಾಸನ:** ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ 2026-27ನೇ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಪಡೆದ ಪ್ರಥಮ ವರ್ಷದ ಬಿ.ಎ., ಬಿ.ಕಾಂ., ಬಿ.ಬಿ.ಎ. ಹಾಗೂ ಬಿ.ಸಿ.ಎ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಮಂಜಯ್ಯ, ಸರ್ಕಾರ ಪದವಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಹಲವು ಮೂಲಭೂತ ಸೌಲಭ್ಯಗಳನ್ನು ನೀಡಿದ್ದು, ವಿದ್ಯಾರ್ಥಿಗಳಿಗೆ ಹಲವು ವಿದ್ಯಾರ್ಥಿ ವೇತನಗಳನ್ನು ನೀಡುತ್ತಿದೆ. ಶಿಕ್ಷಣಕ್ಕೆ ಪೂರಕವಾದ ಉತ್ತಮ ವಾತಾವರಣವನ್ನು ಸರ್ಕಾರಿ ಕಾಲೇಜುಗಳಲ್ಲಿ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಭಾಗದ ಅನೇಕ ಹೆಣ್ಣು ಮಕ್ಕಳು ಸರ್ಕಾರಿ ಕಾಲೇಜುಗಳಲ್ಲಿ ದೊರೆಯುವ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಶಿಕ್ಷಣ ಪಡೆಯಬೇಕು ಎಂದರು.

ಕಾಲೇಜಿನಲ್ಲಿ ದೊರೆಯುವ ವಿವಿಧ ಸೌಲಭ್ಯಗಳ ಕುರಿತು ಹಾಗೂ ವಿವಿಧ ಸಮಿತಿಗಳ ವಿಶೇಷತೆಯನ್ನು ಆಯಾಯ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ವರ್ಗ ಹಾಗೂ ಇನ್ನಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

## ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಿಗೆ ವಿಶೇಷ ತರಬೇತಿ

# ಶೌರ್ಯ ತಂಡಗಳ ಸೇವಾ ಕಾರ್ಯ ಶ್ಲಾಘನೀಯ

• ಪ್ರಜೋದಯ ವರದಿ

**ಸಕಲೇಶಪುರ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಹಾಗೂ ಜನಜಾಗೃತಿ ಪ್ರಾದೇಶಿಕ ವಿಭಾಗ, ಬೆಳ್ತಂಗಡಿ ಇವರ ಸಂಯುಕ್ತ ಆಶ್ರಯದಲ್ಲಿ ತಾಲ್ಲೂಕಿನ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂ ಸೇವಕರಿಗಾಗಿ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ ನಡೆಯಿತು.

ಕಮಾಂಡರ್ ಶಾಂತಿಲಾಲ್ ಜಟಿಯಾ ಅವರು ಮಾತನಾಡಿ, ದೇಶದ ವಿವಿಧ ರಾಜ್ಯಗಳಲ್ಲಿ ಸಮಾಜಮುಖಿ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ ಕರ್ನಾಟಕದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಗ್ರಾಮ ಮಟ್ಟದಲ್ಲಿಯೇ ಶೌರ್ಯ ತಂಡಗಳು ನಮ್ಮೊಂದಿಗೆ ಕೈಜೋಡಿಸುತ್ತಿರುವುದು ವಿಶೇಷವಾಗಿದೆ. ಈ ಸಮಾಜಮುಖಿ ಕಾರ್ಯಕ್ಕೆ ಪ್ರೋತ್ಸಾಹ ನೀಡುತ್ತಿರುವ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ



ಯವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ವಿಪತ್ತು ಸಂಭವಿಸಿದ ಬಳಿಕ ಪರಿಹಾರ ಕಾರ್ಯ ಕೈಗೊಳ್ಳುವುದಕ್ಕಿಂತ ಮುನ್ನೆಚ್ಚರಿಕಾ ಕ್ರಮಗಳು ಮುಖ್ಯವಾಗಿದ್ದು, ಅಗತ್ಯ ತರಬೇತಿ ಹಾಗೂ ಮುಂಜಾಗ್ರತಾ ಕ್ರಮಗಳ ಮೂಲಕ ಜೀವಹಾನಿ ಮತ್ತು ಆಸ್ತಿಪಾಸ್ತಿ ನಷ್ಟವನ್ನು ಕಡಿಮೆ ಮಾಡಬಹುದು. ಶೌರ್ಯ ಸ್ವಯಂಸೇವಕರು ತುರ್ತು ಪರಿಸ್ಥಿತಿಯಲ್ಲಿ ಸಮಯ ಪ್ರಜ್ಞೆಯಿಂದ ಕಾರ್ಯ ನಿರ್ವಹಿಸುವುದರ ಜೊತೆಗೆ ತಮ್ಮ ಸ್ವರಕ್ಷಣೆಗೆ ಆದ್ಯತೆ ನೀಡಬೇಕು. ಸಮಾಜದ ಸಂಕಷ್ಟದ ಸಂದರ್ಭದಲ್ಲಿ ನೆರವಿಗೆ ಧಾವಿಸುವ ಗೋಲ್ಡನ್ ಸಮಯದ ಸೇವಕರು ಎಂಬ ಜವಾಬ್ದಾರಿಯನ್ನು ಅರಿತು ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ಆಪತ್ಕಾಲದಲ್ಲಿ ಜನರ ನೆರವಿಗೆ ಧಾವಿಸುವ ಉದ್ದೇಶದಿಂದ ಶೌರ್ಯ ತಂಡಗಳು ಸಮಾಜಸೇವೆ ಮಾಡುತ್ತಿರುವುದು ಶ್ಲಾಘನೀಯ. ವಿಪತ್ತು ಸಂದರ್ಭದಲ್ಲಿ ಜನರ ಪ್ರಾಣ ಹಾಗೂ ಆಸ್ತಿಪಾಸ್ತಿಗಳ ರಕ್ಷಣೆಗೆ ನೆರವಾಗಲು ಇಂತಹ ತರಬೇತಿಗಳು ಸ್ವಯಂಸೇವಕರ ಆತ್ಮವಿಶ್ವಾಸ ಹಾಗೂ ಕಾರ್ಯ ಕ್ಷಮತೆ ಹೆಚ್ಚಿಸಲಿವೆ ಎಂದರು.

ಅಧಿಕಾರಿಗಳಾದ ಪಾಟೀಲ್ ನಿವೇಶ್, ಆಲ್ಬಿನ್ ಜಗದೀಶ್ ಹಾಗೂ ಮಹಾಂತೇಶ ತರಬೇತಿ ನೀಡಿದರು.

ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಗಾಯಗೊಂಡವರನ್ನು ತುರ್ತು ಸೇವೆಯ ಮೂಲಕ ಆಸ್ಪತ್ರೆಗೆ ಸಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶೌರ್ಯ ತಂಡದ ಹರೀಶ್ ಅವರನ್ನು ಕಮಾಂಡರ್ ಶಾಂತಿಲಾಲ್ ಜಟಿಯಾ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಡಾ. ನವೀನ್ ಚಂದ್ರಶೆಟ್ಟಿ, ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್, ಲಯನ್ಸ್ ಸೇವಾ ಸಂಸ್ಥೆಯ ಅಧ್ಯಕ್ಷ ವಿಶ್ವನಾಥ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರು, ಜನಜಾಗೃತಿ ಪ್ರಾದೇಶಿಕ ಹಾಗೂ ಕ್ಷೇತ್ರದ ಅಧಿಕಾರಿಗಳು, ಸಿಬ್ಬಂದಿ ಸ್ವಯಂಸೇವಕರು ಇದ್ದರು.

# ರಾಷ್ಟ್ರೀಯ ಪುಟ್ಬಾಲ್ ತಂಡಕ್ಕೆ ಪದ್ಮನಾಭ ಆಯ್ಕೆ

• ಪ್ರಜೋದಯ ವರದಿ



**ಹಾಸನ:** ತಾಲ್ಲೂಕಿನ ಸಾಲಗಾಮೆ ಹೋಬಳಿ ವೀರಾಪುರದ ವಿ.ಪಿ. ಲೋಕೇಶ್ (ಪತ್ರಕರ್ತ) ಹಾಗೂ ಡಿ.ಟಿ. ಹೇಮಲತಾ ಅವರ ಪುತ್ರ ವಿ.ಎಲ್. ಪದ್ಮನಾಭಗೌಡ ಅವರು ರಾಷ್ಟ್ರೀಯ ಪುಟ್ಬಾಲ್ ತಂಡಕ್ಕೆ ಆಯ್ಕೆಯಾಗುವ ಮೂಲಕ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ.

ಸೌತ್ ಯುನೈಟೆಡ್ ಫುಟ್ಬಾಲ್ ಕ್ಲಬ್‌ನಂತಹ ದೇಶದ ಪ್ರತಿಷ್ಟಿತ ಕ್ಲಬ್‌ನಲ್ಲಿ ತರಬೇತಿ ಪಡೆದು ಮೊದಲ ಪ್ರಯತ್ನದಲ್ಲೇ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗುವ ಮೂಲಕ ವಿದ್ಯಾರ್ಥಿ ಎಲ್ಲರ ಗಮನ ಸೆಳೆದಿದ್ದಾನೆ.

ಪದ್ಮನಾಭಗೆ ಕೃಷ್ಣ ಅವರು ತರಬೇತಿ ನೀಡಿದ್ದಾರೆ. 2024ರ ಮಿನಿ ಒಲಿಂಪಿಕ್ಸ್‌ನಲ್ಲಿ ಜಿಲ್ಲಾ ಪುಟ್ಬಾಲ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಆ ತಂಡದಲ್ಲಿ ಗೋಲ್ ಕೀಪರ್ ಆಗಿ ಪದ್ಮನಾಭ ಉತ್ತಮ ಸಾಧನೆ ತೋರಿದ್ದರು.

ಹೇಮಾವತಿ ನಗರದ ರಾಯಲ್ ಅಪೋಲೋ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ 1 ರಿಂದ 9ನೇ ತರಗತಿ ವರೆಗೆ ವ್ಯಾಸಂಗ ಮಾಡಿದ್ದು ಸದ್ಯ 10ನೇ ತರಗತಿಯನ್ನು ಬೆಂಗಳೂರಿನ ವಿನ್ ಮೋರ್ ಅಕಾಡೆಮಿಯಲ್ಲಿ ಓದುತ್ತಿದ್ದಾನೆ.

# ಚಿಕಿತ್ಸೆಗೆ ಕರೆದೊಯ್ಯುತ್ತಿದ್ದ ರೋಗಿ ಸಾವು

## ಆಕ್ರೋಶಗೊಂಡ ಸಂಬಂಧಿಕರಿಂದ ಆಂಬುಲೆನ್ಸ್ ಗಾಜು ಪುಡಿಪುಡಿ

• ಪ್ರಜೋದಯ ವರದಿ



**ಅರಕಲಗೂಡು:** ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆಂಬುಲೆನ್ಸ್ ಸಿಬ್ಬಂದಿ ನಿರ್ಲಕ್ಷ್ಯದಿಂದ ರೇವಣ್ಣ (49) ಎಂಬ ರೋಗಿಯೊಬ್ಬರು ಸಾವನ್ನಪ್ಪಿದ್ದಾರೆ ಎಂದು ಆಕ್ರೋಶಗೊಂಡ ಮೃತನ ಕುಟುಂಬಸ್ಥರು ಹಾಗೂ ಸಂಬಂಧಿಕರು ಸಿಬ್ಬಂದಿಗಳ ಮೇಲೆ ಹಲ್ಲೆ ನಡೆಸಿದರಲ್ಲದೇ ರೋಗಿಯನ್ನು ಕರೆದೊಯ್ಯುತ್ತಿದ್ದ 108 ಆಂಬುಲೆನ್ಸ್‌ನ ಮುಂಭಾಗದ ಗಾಜು ಒಡೆದು ಆಕ್ರೋಶ ವ್ಯಕ್ತಪಡಿಸಿರುವ ಘಟನೆ ಮಂಗಳವಾರ ಮಧ್ಯಾಹ್ನ ನಡೆದಿದೆ.

ತಾಲ್ಲೂಕಿನ ಹೊಂಡರವಳ್ಳಿ ಗ್ರಾಮದ ನಿವಾಸಿ ರೇವಣ್ಣ ಅವರನ್ನು ಕುಟುಂಬಸ್ಥರು ಅರಕಲಗೂಡು ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತಂದಿದ್ದರು. ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗೆ ಹಾಸನ ಆಸ್ಪತ್ರೆಗೆ 108 ಆಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಗುತ್ತಿತ್ತು. ಈ ವೇಳೆ ಮಾರ್ಗ ಮಧ್ಯೆ ರೇವಣ್ಣ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಇದರಿಂದ ಆಕ್ರೋಶಗೊಂಡ ಕುಟುಂಬಸ್ಥರು ಆಂಬುಲೆನ್ಸ್ ಸಿಬ್ಬಂದಿ ವಿರುದ್ಧ ಅಸಮಾಧಾನ




ವ್ಯಕ್ತಪಡಿಸಿ, ಆಂಬುಲೆನ್ಸ್‌ನ ಗಾಜು ಒಡೆದು ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಎನ್ನಲಾಗಿದೆ.

ರೇವಣ್ಣ ಅವರ ಸಾವಿಗೆ ಆಂಬುಲೆನ್ಸ್ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣವೇ ಎಂಬ ಆರೋಪ ಕೇಳಿ ಬಂದಿದ್ದು, ಈ ಕುರಿತು ಸಮಗ್ರ ತನಿಖೆ ನಡೆಯಬೇಕಿದೆ. ಘಟನೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳು ಸತ್ಯಾಸತ್ಯತೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕುಟುಂಬಸ್ಥರು ಒತ್ತಾಯಿಸಿದ್ದಾರೆ.

ಸ್ಥಳಕ್ಕೆ ಆಗಮಿಸಿದ ಪೊಲೀಸರು ಕುಟುಂಬದವರನ್ನು ಸಮಧಾನಪಡಿಸಿದರು. ಸಂಜೆ ವೇಳೆಯಾದರೂ ಕೂಡ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ.

ಘಟನೆಯ ಸಂಪೂರ್ಣ ವಿವರ ಹಾಗೂ ಸಾವಿನ ನಿಖರ ಕಾರಣ ಹಾಗೂ ಸತ್ಯಾಸತ್ಯತೆ ಸೂಕ್ತ ತನಿಖೆಯಿಂದಷ್ಟೇ ತಿಳಿದು ಬರಬೇಕಿದೆ.

# ನೈಸ್ ರಾದ್ಧಾಂತ: ರಾಜ್ಯಪಾಲರಿಗೆ ಜೆಡಿಎಸ್ ದೂರು

## 2 ವಾರದಲ್ಲಿ ಕ್ರಮ ಕೈಗೊಳ್ಳದಿದ್ದರೆ ಹೋರಾಟ | ನಿಖಿಲ್ ಕುಮಾರಸ್ವಾಮಿ ಎಚ್ಚರಿಕೆ

• ಪ್ರಜೋದಯ ವರದಿ

**ಬೆಂಗಳೂರು:** ಮೈಸೂರು-ಬೆಂಗಳೂರು ಕಾರಿಡಾರ್ (ಬಿಎಂಐಸಿಪಿ) ಯೋಜನೆಯಲ್ಲಿ ನೈಸ್ ಸಂಸ್ಥೆ ನಡೆಸಿರುವ ಅಕ್ರಮ ಮತ್ತು ವಂಚನೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಜೆಡಿಎಸ್ ನಿಯೋಗ ಮಂಗಳವಾರ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ದೂರು ಸಲ್ಲಿಸಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಅವರ ನೇತೃತ್ವದಲ್ಲಿ ಜೆಡಿಎಸ್ ಶಾಸಕರು ಹಾಗು ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಲೋಕ ಭವನದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ, ಹೈಕೋರ್ಟ್ ತೀರ್ಪಿನ ಪ್ರತಿ ಸಮೇತ 5 ಪುಟಗಳ ಮನವಿ ಪತ್ರ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ನಿಖಿಲ್ ಕುಮಾರಸ್ವಾಮಿ ಅವರು, ನೈಸ್ ಯೋಜನೆ ಅಕ್ರಮದ ಬಗ್ಗೆ ಸರ್ಕಾರಕ್ಕೆ ನಾವು ಎರಡು ವಾರ ಗಡುವು ಕೊಡುತ್ತೇವೆ. ಸರ್ಕಾರ ನೈಸ್ ಯೋಜನೆಯನ್ನು ವಶಪಡಿಸಿಕೊಳ್ಳದಿದ್ದರೆ ಉಗ್ರ ಹೋರಾಟ ಮಾಡಲಾಗುವುದು. ನೈಸ್ ಅಕ್ರಮದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತೇವೆ. ಗುರುವಾರ, ಶುಕ್ರವಾರ ವೆಬ್ ಸೈಟ್ ರಿಲೀಸ್ ಮಾಡುತ್ತೇವೆ. ಅದರಲ್ಲಿ ಎಲ್ಲಾ ದಾಖಲಾತಿ ಜನರಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಹೈಕೋರ್ಟ್ ನೈಸ್ ಬಗ್ಗೆ ಐತಿಹಾಸಿಕ ತೀರ್ಪು ಕೊಟ್ಟಿದೆ. ನೈಸ್ ಯೋಜನೆ ದೊಡ್ಡ ಹಗರಣ ಅಂತ ಕೋರ್ಟ್ ಹೇಳಿದೆ. ಜಮೀನು ಸ್ವಾಧೀನ ಮಾಡಿಕೊಂಡು ರೈತರಿಗೆ ಪರಿಹಾರ ಕೊಟ್ಟಿಲ್ಲ. ಭೂಸ್ವಾಧೀನ ಅಂತಿಮ ಅಧಿಸೂಚನೆ ಕೋರ್ಟ್ ರದ್ದು ಮಾಡಿದೆ. ನೈಸ್‌ನಲ್ಲಿ ಫ್ರೇಮ್ ವರ್ಕ್ ಅಗ್ರಿಮೆಂಟ್ ಉಲ್ಲಂಘನೆ ಆಗಿದೆ ಎಂದು ಆರೋಪಿಸಿದರು.

### ರೈತರ ಭೂಮಿ ನುಂಗಿದ ನೈಸ್-ಸರ್ಕಾರ ಮೌನ ಏಕೆ? ನಿಖಿಲ್ ಕುಮಾರಸ್ವಾಮಿ ಪ್ರಶ್ನೆ



ಈ ವಿಚಾರದಲ್ಲಿ ಸರ್ಕಾರ ಮೌನ ವಹಿಸಿರುವುದು ಸರಿಯಲ್ಲ. ಸರ್ಕಾರ ಜನರ ಪರ, ರೈತರ ಪರ ಇರಬೇಕು. ಕೋಟ್ಯಾಂತರ ರೂ. ಟೋಲ್ ಸಂಗ್ರಹ ಮಾಡುತ್ತಿದ್ದಾರೆ. ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಬೇಕು. ನೈಸ್ ಯೋಜನೆ ಸರ್ಕಾರ ಟೇಕ್ ಓವರ್ ಮಾಡಬೇಕು ಅಂತ ಕೋರ್ಟ್ ಹೇಳಿದೆ. ಆದರೂ ಸರ್ಕಾರ ಮೌನಕ್ಕೆ ಶರಣಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಮಾರಸ್ವಾಮಿ ಅವರು ಯಾವತ್ತು ದಾಖಲಾತಿ ಇಲ್ಲದೆ ಮಾತಾಡಲ್ಲ. ಹಿಟ್ ಅಂಡ್ ರನ್ ಬಗ್ಗೆ ಹೊಸದಾಗಿ ಆಗಿರುವ ಸಚಿವರು ಮಾತಾಡ್ತಾರೆ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬಹಿರಂಗ ಚರ್ಚೆಗೆ ಆಹ್ವಾನಿಸಿದರೂ ಬಾರದೆ ಪಲಾಯನ ಮಾಡಿದ್ದು ಏಕೆ ಎಂದು ಪ್ರಶ್ನಿಸಿದರು.

**ಬಿಜೆಪಿ ಹೋರಾಟಕ್ಕೆ ಬೆಂಬಲ**

ಸದನದ ಒಳಗೆ ಒಟ್ಟಾಗಿ ಹೋರಾಟ ಮಾಡಿದ್ದೇವೆ. ಈಗ ಸದನ ಹೊರಗೆ ನಾವು ಬಿಜೆಪಿ ಜೊತೆ ಇರ್ತೀವಿ. ನಾಡಿನ ಯಾವುದೇ ವಿಷಯ ಬಂದಾಗ ಬಿಜೆಪಿ ಜೊತೆ ನಾವು ಒಟ್ಟಾಗಿ ಹೋಗ್ತೀವಿ. ಸಿದ್ದರಾಮಯ್ಯ ಅವರೇ ಅಕ್ರಮ ಆಗಿರೋದು ಒಪ್ಪಿಕೊಂಡಿದ್ದಾರೆ. ಇಷ್ಟಾದ್ರೂ ಆರೋಪ ಇರೋ ವ್ಯಕ್ತಿಯನ್ನ ಯಾಕೆ ಸಚಿವನಾಗಿ ತಗೊಂಡ್ರು? ಬಿಜೆಪಿ ಹೋರಾಟಕ್ಕೆ ನಮ್ಮ ಬೆಂಬಲ ಇದೆ ಎಂದು ಹೇಳಿದರು.

**ಜೆಡಿಎಸ್‌ನ ಪ್ರಮುಖ ಪ್ರಶ್ನೆಗಳು**

ನೈಸ್ ರಸ್ತೆ ವಿಚಾರವಾಗಿ ಜೆಡಿಎಸ್ ಪ್ರಮುಖ ಪ್ರಶ್ನೆಗಳನ್ನು ಮುನ್ನಲೆಗೆ ತಂದಿದೆ. 20 ವರ್ಷದಿಂದ ಅವಾರ್ಡ್ ಪಾಸ್ ಮಾಡದೆ ಪರಿಹಾರ ನೀಡದಿರುವುದು ಸ್ಪಷ್ಟ ಉಲ್ಲಂಘನೆ. ಭೂಮಿಯನ್ನು ಖಾಸಗಿ ಡೆವಲಪರ್‌ಗಳಿಗೆ ಮಾರಾಟ ಮಾಡಿದೆ ಎಂದು ಕೋರ್ಟ್ ಹೇಳಿದೆ. ಕೆರೆ, ಕಟ್ಟೆಗಳ ಭೂಮಿಯನ್ನು ನೈಸ್‌ಗೆ ನೀಡಿರುವುದು ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧ. 111 ಕಿ.ಮೀ.ನಲ್ಲಿ 25 ವರ್ಷದಲ್ಲಿ ಕೇವಲ 5 ಕಿ.ಮೀ. ನಿರ್ಮಾಣ, 20,193 ಎಕರೆ ಭೂ ಬ್ಯಾಂಕ್ ಇಟ್ಟುಕೊಂಡು ರಿಯಲ್ ಎಸ್ಟೇಟ್ ದಂಧೆ. ರಾಜ್ಯದ ಅತಿದೊಡ್ಡ ಹಗರಣಗಳಲ್ಲಿ ಇದು ಒಂದು ಎಂದು ಕೋರ್ಟ್ ಹೇಳಿದೆ.

ಆದ್ದರಿಂದ ತಕ್ಷಣ ಅನಧಿಕೃತ ಟೋಲ್ ಸಂಗ್ರಹ ತಕ್ಷಣ ನಿಲ್ಲಿಸಬೇಕು. ಹೆಚ್ಚುವರಿ 554 ಎಕರೆ ಭೂಮಿಯನ್ನು ಕೂಡಲೇ ವಾಪಸ್ ಪಡೆಯಬೇಕು. ಯೋಜನೆಯನ್ನು ಸರ್ಕಾರವೇ ವಶಕ್ಕೆ ಪಡೆಯಲು ವಿಶೇಷ ಕಾನೂನು ಜಾರಿ ಮಾಡಬೇಕು. ರೈತರಿಗೆ ಪರಿಹಾರ ಮತ್ತು ಭೂಮಿ ವಾಪಾಸ್ ನೀಡಬೇಕು. ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಕೆರೆ-ಕಟ್ಟೆಗಳ ಭೂಮಿಯನ್ನು ಮರಳಿ ಸಾರ್ವಜನಿಕ ಸ್ವಾಮ್ಯಕ್ಕೆ ಪಡೆಯಬೇಕೆಂದು ಜೆಡಿಎಸ್ ಆಗ್ರಹಿಸಿದೆ.

# ಅರಕಲಗೂಡಿಗೆ ರೈಲ್ವೆ ಮಾರ್ಗ: ಕೇಂದ್ರದಿಂದ ಸಾಧ್ಯತಾ ಅಧ್ಯಯನ

» ಮೊದಲನೇ ಪುಟದಿಂದ

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗು ರಾಜ್ಯ ರೈಲ್ವೆ ಸಚಿವ ವಿ. ಸೋಮಣ್ಣ ಅವರನ್ನು ಭೇಟಿಯಾಗಿ ಮನವಿಯನ್ನೂ ಸಲ್ಲಿಸಿದ್ದಾರೆ.

**ವರ್ಷಗಳ ಬೇಡಿಕೆಗೆ ಮತ್ತೆ ಜೀವ**

ಅರಕಲಗೂಡು ತಾಲ್ಲೂಕು ಜಿಲ್ಲಾ ಕೇಂದ್ರ, ಹಾಸನ ಹಾಗು ಕೊಡಗು ಜಿಲ್ಲೆಯ ಪ್ರಮುಖ ಪ್ರದೇಶಗಳ ನಡುವೆ ಸಂಪರ್ಕ ಕೊಂಡಿಯಾಗಿದ್ದರೂ ಇದುವರೆಗೆ ರೈಲ್ವೆ ಸಂಪರ್ಕದ ಸೌಲಭ್ಯದಿಂದ ವಂಚಿತವಾಗಿದೆ. ಹೀಗಾಗಿ ಅರಕಲಗೂಡಿಗೆ ರೈಲು ಸಂಪರ್ಕ ಕಲ್ಪಿಸಬೇಕೆಂಬುದು ಹಲವು ವರ್ಷಗಳಿಂದ ಜನಪ್ರತಿನಿಧಿಗಳು ಹಾಗು ಸಾರ್ವಜನಿಕರ ಬೇಡಿಕೆಯಾಗಿದೆ.

ರಸ್ತೆ ಸಾರಿಗೆಯನ್ನೇ ಅವಲಂಬಿಸಿರುವ ಈ ಭಾಗಕ್ಕೆ ರೈಲು ಸಂಪರ್ಕ ದೊರೆತರೆ ಹಾಸನ, ಕೊಡಗು ಹಾಗು ಮೈಸೂರು ಭಾಗಗಳ ನಡುವಿನ ಪ್ರಯಾಣ ಮತ್ತಷ್ಟು ಸುಗಮವಾಗಲಿದೆ. ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಸ್ಥರು, ಪ್ರವಾಸಿಗರಿಗೆ ಅನುಕೂಲವಾಗುವುದರ ಜೊತೆಗೆ ಕೃಷಿ ಉತ್ಪನ್ನಗಳ ಸಾಗಣೆಯಲ್ಲಿಯೂ ಹೊಸ ಅವಕಾಶಗಳು ಸೃಷ್ಟಿಯಾಗಲಿವೆ.

**ಕೊಡಗಿಗೂ ರೈಲು ಸಂಪರ್ಕದ ಹೆಜ್ಜೆ**

ಕೊಡಗು ಜಿಲ್ಲೆಗೆ ರೈಲ್ವೆ ಸಂಪರ್ಕ ಕಲ್ಪಿಸಬೇಕೆಂಬ ಹೋರಾಟವೂ ದಶಕಗಳಿಂದ ನಡೆಯುತ್ತಿದೆ. ಮೈಸೂರು-ಮಡಿಕೇರಿ ರೈಲು ಮಾರ್ಗ ನಿರ್ಮಾಣದ ಕುರಿತು ಹಲವು ಹಂತಗಳಲ್ಲಿ ಚರ್ಚೆಗಳು ನಡೆದಿವೆ. ಮಾರ್ಗದ ಸಾಧಕ-ಬಾಧಕ, ಭೌಗೋಳಿಕ ಪರಿಸ್ಥಿತಿ ಹಾಗು ಪರಿಸರದಂತಹ ಅಂಶಗಳ ಬಗ್ಗೆಯೂ ಚರ್ಚೆ ಮುಂದುವರಿದಿದೆ. ಈ ನಡುವೆ ಶ್ರವಣಬೆಳಗೊಳದಿಂದ ಹೊಳೆನರಸೀಪುರ, ಅರಕಲಗೂಡು, ಕೊಣನೂರು ಮಾರ್ಗವಾಗಿ ಕುಶಾಲನಗರ ಹಾಗು ಮಡಿಕೇರಿಯನ್ನು ಸಂಪರ್ಕಿಸುವ ಪರ್ಯಾಯ ಮಾರ್ಗದ ಸಾಧ್ಯತಾ ಅಧ್ಯಯನ ನಡೆದಿರುವುದು ಮಹತ್ವ ಪಡೆದಿದೆ. ಯೋಜನೆ ಕಾರ್ಯರೂಪಕ್ಕೆ ಬಂದರೆ ಹಾಸನ ಮತ್ತು ಕೊಡಗು ಜಿಲ್ಲೆಗಳ ನಡುವೆ ಹೊಸ ರೈಲು ಸಂಪರ್ಕ ಕೊಂಡಿ ನಿರ್ಮಾಣವಾಗಲಿದೆ.

**ಕಾಫಿ-ಮೆಣಸು ಸಾಗಣಿಕೆಗೆ ಅನುಕೂಲ**

ಕೊಡಗು ಹಾಗು ಮಲೆನಾಡು ಭಾಗದ ಪ್ರಮುಖ ಆರ್ಥಿಕ ಚಟುವಟಿಕೆಗಳಲ್ಲಿ ಕೃಷಿ ಮತ್ತು ತೋಟ ಗಾರಿಕೆ ಪ್ರಮುಖವಾಗಿವೆ. ಕಾಫಿ, ಮೆಣಸು, ಏಲಕ್ಕಿ ಸೇರಿ ವಿವಿಧ ಉತ್ಪನ್ನಗಳನ್ನು ರಾಜ್ಯದ ಹಾಗು ಹೊರ ರಾಜ್ಯದ ಮಾರುಕಟ್ಟೆಗಳಿಗೆ ಸಾಗಿಸಲು ರೈಲು ಸಂಪರ್ಕ ನೆರವಾಗುವ ನಿರೀಕ್ಷೆಯಿದೆ.

ಕೃಷಿ ಉತ್ಪನ್ನಗಳ ಸಾಗಣೆ ವೆಚ್ಚ ಕಡಿಮೆಯಾಗುವುದರ ಜೊತೆಗೆ ಮಾರುಕಟ್ಟೆ ವಿಸ್ತರಣೆಗೆ ಅವಕಾಶ ದೊರೆಯಲಿದೆ. ಪ್ರವಾಸೋದ್ಯಮಕ್ಕೂ ರೈಲು ಸಂಪರ್ಕ ಹೊಸ ಚೈತನ್ಯ ನೀಡುವ ಸಾಧ್ಯತೆಯಿದೆ. ಮಡಿಕೇರಿ, ಕುಶಾಲನಗರ ಸೇರಿ ಕೊಡಗಿನ ಪ್ರವಾಸಿ ತಾಣಗಳಿಗೆ ರಾಜ್ಯದ ವಿವಿಧ ಭಾಗಗಳಿಂದ ಪ್ರವಾಸಿಗರ ಸಂಚಾರ ಹೆಚ್ಚಾಗಬಹುದು.

**ಉದ್ಯೋಗ, ಪ್ರವಾಸೋದ್ಯಮಕ್ಕೂ ಉತ್ತೇಜನ**

ರೈಲು ಮಾರ್ಗ ನಿರ್ಮಾಣ ಕಾಮಗಾರಿ ಆರಂಭವಾದರೆ ನೇರ ಹಾಗು ಪರೋಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ರೈಲು ನಿಲ್ದಾಣಗಳ ಸುತ್ತಮುತ್ತ ವ್ಯಾಪಾರ ವಹಿವಾಟು ವೃದ್ಧಿಯಾಗುವ ಜೊತೆಗೆ ಹೊಸ ವಸತಿ, ಸಾರಿಗೆ ಹಾಗು ಸೇವಾ ಚಟುವಟಿಕೆಗಳು ಬೆಳೆಯಬಹುದು. ಹೀಗಾಗಿ ಈ ಯೋಜನೆಯನ್ನು ಕೇವಲ ರೈಲು ಸಂಪರ್ಕದ ಯೋಜನೆಯಾಗಿ ನೋಡದೆ, ಹಾಸನ-ಕೊಡಗು ಭಾಗದ ಭವಿಷ್ಯದ ಆರ್ಥಿಕ ಮತ್ತು ಪ್ರಾದೇಶಿಕ ಅಭಿವೃದ್ಧಿಗೆ ಪೂರಕವಾದ ಮೂಲಸೌಕರ್ಯ ಯೋಜನೆಯಾಗಿ ಪರಿಗಣಿಸ ಬೇಕೆಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

# ಕ್ಯಾತನಹಳ್ಳಿ ಏತ ನೀರಾವರಿ: ನೀರು ಹರಿಸಲು ನಿರ್ಲಕ್ಷ್ಯ

» ಮೊದಲನೇ ಪುಟದಿಂದ

ಉಳಿಕೆ ಕಾಮಗಾರಿ ಮತ್ತು ವಿತರಣಾ ನಾಲಾ ಕಾಮಗಾರಿಯನ್ನು ಸಮಿತಿ ಸಲಹೆಯಿಂದ ಡಿ.2016ರ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಹರಿಸಬೇಕೆಂದು ಆದೇಶವಿದ್ದರೂ, ಇದುವರೆಗೂ ನೀರು ಹರಿಸಿಲ್ಲ ಎಂದು ತಿಳಿಸಿದರು.

ಪ್ರಸ್ತುತ ಹಾಸನ ತಾಲ್ಲೂಕಿನಲ್ಲೂ ತೀವ್ರ ಬರ ಪರಿಸ್ಥಿತಿ ಇದ್ದು, ಕೆರೆ ಕಟ್ಟೆಗಳು ಬತ್ತಿ ಹೋಗಿದ್ದು, ಬೆಳೆಗೆ ಇರಲಿ, ಜನ-ಜಾನುವಾರುಗಳಿಗೆ ಕುಡಿಯಲು ನೀರಿಲ್ಲ. ಕ್ಯಾತನಹಳ್ಳಿ ಏತ ನೀರಾವರಿ ನೀರಿನ ಮೂಲವಾದ ಯಗಚಿ ಎಡದಂಡೆ ನಾಲೆಯ ಸರಪಳಿ 33.13 ಕಿಮೀನಲ್ಲಿ ನೀರು ಎತ್ತಲಾಗುತ್ತದೆ. ಯಗಚಿ ಜಲಾಶಯ ಭರ್ತಿಯಾಗಿದ್ದರೂ ನೀರು ಹರಿಸುವ ಕಾರ್ಯಕ್ಕೆ ಯಾರೂ ಮುಂದಾಗಿಲ್ಲ ಎಂದು ಆರೋಪಿಸಿದರು.

ಕಾರಣ ಕೇಳಿದರೆ ಸುಮಾರು 2 ಕೋಟಿಯಷ್ಟು ವಿದ್ಯುತ್ ಬಿಲ್ ಬಾಕಿ ಇದೆ ಎಂದು ಹೇಳುತ್ತಿದ್ದಾರೆ. ಬೇರೆ ಬೇರೆ ಕಡೆಗಳಲ್ಲಿ 50 ಕೋಟಿಯಷ್ಟು ಬಿಲ್ ಬಾಕಿ ಇದ್ದರೂ, ನೀರು ಹರಿಸಲಾಗುತ್ತಿದೆ. ನಮಗೆ ಏಕೆ ಈ ಅಡೆತಡೆ ಎಂದು ಪ್ರಶ್ನಿಸಿದ ಅವರು, ಈ ಸಂಬಂಧ ಜಿಲ್ಲಾಧಿಕಾರಿ ನೇತೃತ್ವದಲ್ಲಿ ರೈತರು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿ, ಶೀಘ್ರ ನೀರು ಹರಿಸುವ ಭರವಸೆ ನೀಡಿದ್ದರು. ಆದರೂ ಕೊಟ್ಟ ಭರವಸೆಯನ್ನು ಯಾರೂ ಈಡೇರಿಸಿಲ್ಲ. ಕೂಡಲೇ ನೀರು ಹರಿಸದೇ ಇದ್ದರೆ ಬೇಲೂರು-ಹಾಸನ ರಸ್ತೆ ಬಂದ್ ಮಾಡಿ ಕಡದರಹಳ್ಳಿ ಬಳಿ ಅನಿರ್ದಿಷ್ಟ ಹೋರಾಟ ಆರಂಭಿಸುವುದಾಗಿ ಎಚ್ಚರಿಕೆ ನೀಡಿದರು.

ಯುವ ಮುಖಂಡ ದರ್ಶನ್ ಮಾತನಾಡಿ, ಯೋಜನೆಗೆ ಭೂಮಿ ನೀಡಿದ ರೈತರಿಗೂ ಸೂಕ್ತ ರೀತಿಯಲ್ಲಿ ಪರಿಹಾರ ನೀಡಿಲ್ಲ. ಒಂದು ಕಡೆ ನೀರಿಲ್ಲ, ಮತ್ತೊಂದು ಕಡೆ ಪರಿಹಾರವೂ ಇಲ್ಲದೆ ರೈತರ ಸ್ಥಿತಿ ಅತಂತ್ರವಾಗಿದೆ. ಇನ್ನಾದರೂ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಇತ್ತ ಗಮನ ಹರಿಸಿ ನೀರು ಹರಿಸಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ಮಂಜುನಾಥ್, ಮುಖಂಡರಾದ ಪಾಲಾಕ್ಷ, ಸುರೇಶ್, ಕುಪ್ಪಳ್ಳಿ ಅಣ್ಣಯ್ಯ ಇದ್ದರು.

# ಅಂತಾರಾಜ್ಯ ಡ್ರಗ್ಸ್ ಮಾಫಿಯಾ ಜಾಲ ಭೇದಿಸಿದ ಪೊಲೀಸರು

■ 10 ಲ.ರೂ. ಮೌಲ್ಯದ ಪದಾರ್ಥ ಜಪ್ತಿ| ಮಂಗಳೂರು-ಕೇರಳ ಮೂಲದ 6 ಪೆಡ್ಲರ್‌ಗಳ ಬಂಧನ



• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಯುವಕರನ್ನು ಗುರಿಯಾಗಿಸಿಕೊಂಡು ಮಾದಕ ವಸ್ತುಗಳ ಮಾರಾಟ ಮಾಡುತ್ತಿದ್ದ ಮಂಗಳೂರು-ಕೇರಳ ಮೂಲದ ಆರು ಪೆಡ್ಲರ್‌ಗಳನ್ನು ಬಂಧಿಸಿರುವ ಪೊಲೀಸರು 10 ಲ.ರೂ. ಮೌಲ್ಯದ 100 ಗ್ರಾಂ ಎಂಡಿಎಂಎ ಪದಾರ್ಥ ಮತ್ತು 2 ಕಾರು ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ಎಪಿಎಂಸಿ ಯಾರ್ಡ್ ಬಳಿ ಕಾರುಗಳಲ್ಲಿ ನಿಂತು ಮಾದಕ ವಸ್ತು ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿದರು.

ಮಾದಕ ವಸ್ತು ಸಾಗಾಟ ಹಾಗು ಮಾರಾಟಕ್ಕೆ ಬಳಸಲಾಗಿದೆ ಎನ್ನಲಾದ ಒಂದು ಹ್ಯುಂಡೈ ಕಾರು ಮತ್ತು ಒಂದು ಮಾರುತಿ ಸ್ವಿಫ್ಟ್ ಡಿಜೈರ್ ಕಾರು ವಶಪಡಿಸಿ ಕೊಂಡಿದ್ದಾರೆ. ಬಂಧಿತರು ಅಂತಾರಾಜ್ಯ ಸಂಪರ್ಕ ಹೊಂದಿರುವ ಸಾಧ್ಯತೆಯ ಹಿನ್ನಲೆಯಲ್ಲಿ ಸುದೀರ್ಘ ವಿಚಾರಣೆ ನಡೆಸಲಾಗುತ್ತಿದೆ. ಕಾಫಿ ತೋಟದ ಕಾರ್ಮಿಕರು, ಕಾಲೇಜು ವಿದ್ಯಾರ್ಥಿಗ ಳನ್ನು ಗುರಿಯಾಗಿಸಿಕೊಂಡು ವ್ಯವಹಾರ ನಡೆಸುತ್ತಿದ್ದರು ಎಂದು ತಿಳಿದುಬಂದಿದೆ. ಡಿವೈಎಸ್ಪಿ ಮಾಲತೇಶ್, ಇನ್ಸ್‌ಪೆಕ್ಟರ್ ವನರಾಜು ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು.

**ಸಾರ್ವಜನಿಕರ ಮೆಚ್ಚುಗೆ:** ಸಕಲೇಶಪುರದಲ್ಲಿ ಯುವಕರನ್ನು ಮಾದಕ ವಸ್ತುಗಳ ಪಿಡುಗಿನಿಂದ ರಕ್ಷಿಸುವ ನಿಟ್ಟಿನಲ್ಲಿ ಪೊಲೀಸರು ನಡೆಸಿದ ಕಾರ್ಯಾಚರಣೆಗೆ ಸಾರ್ವಜನಿಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನ ಕೂಡ ಪೊಲೀಸರ ಕಾರ್ಯಾಚರಣೆ ಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದೆ. ಯುವಕರನ್ನು ಗುರಿ ಯಾಗಿಸಿಕೊಂಡು ನಡೆಯುತ್ತಿರುವ ಮಾದಕ ವಸ್ತುಗಳ ದಂಧೆಗೆ ಕಡಿವಾಣ ಹಾಕಲು ಇಂತಹ ನಿರಂತರ ಹಾಗು ಕಠಿಣ ಪೊಲೀಸ್ ಕಾರ್ಯಾಚರಣೆ ಅಗತ್ಯವಿದೆ ಎಂದು ಸಂಘಟನೆ ಪ್ರಮುಖರು ಅಭಿಪ್ರಾಯಪಟ್ಟಿದ್ದಾರೆ.

ಡ್ರಗ್ಸ್ ಮುಕ್ತ ಭಾರತ ಆಂದೋಲನದ ಪ್ರಮುಖರಾದ ಹೆಚ್.ಎಂ.ವಿಶ್ವನಾಥ್, ಮಲ್ನಾಡ್‌ಮೆಹಬೂಬ್ ಹಾಗು ಪದಾಧಿಕಾರಿಗಳು, ವಿವಿಧ ಸಂಘಟನೆಗಳು ಪೊಲೀಸ್ ಕಾರ್ಯಾಚರಣೆಗೆ ಮೆಚ್ಚುಗೆ ವ್ಯಕ್ತಪಡಿಸಿವೆ.

# ಸೆ.1 ರಿಂದ 10ರ ವರೆಗೆ ಬಿಜೆಪಿ ಪಾದಯಾತ್ರೆ

## ರಾಜ್ಯ ಸರ್ಕಾರದ ವಿರುದ್ಧ ಕಹಳೆ | ಜೆಡಿಎಸ್ ಬೆಂಬಲ ನೀಡಲಿದೆ-ವಿಜಯೇಂದ್ರ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ವಿರೋಧಿಸಿ ಕರ್ನಾಟಕ ಬಿಜೆಪಿ ಸೆ.1 ರಿಂದ 10ರ ವರೆಗೆ ರಾಯಚೂರಿನಿಂದ ಬಳ್ಳಾರಿಗೆ 10 ದಿನಗಳ ಪಾದಯಾತ್ರೆ ಕೈಗೊಳ್ಳಲಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ರೈತರ ಸಂಕಷ್ಟ, ನಿರುದ್ಯೋಗ, ಮೀಸಲಾತಿ ಸಮಸ್ಯೆ ಮತ್ತು ನೇಮಕಾತಿಯಲ್ಲಿನ ಭ್ರಷ್ಟಾಚಾರದ ಆರೋಪಗಳ ಜೊತೆಗೆ ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಬಿ. ನಾಗೇಂದ್ರ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಂಡಿರುವುದನ್ನು ಬಿಜೆಪಿ ವಿರೋಧಿಸಿ ಪಾದಯಾತ್ರೆ ನಡೆಯಲಿದೆ. ಸುಮಾರು 200 ಕಿ.ಮೀ. ಪಾದಯಾತ್ರೆ ಸೆ.1 ರಂದು ರಾಯಚೂರಿನಲ್ಲಿ ಪ್ರಾರಂಭವಾಗಲಿದ್ದು, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಚಾಲನೆ ನೀಡಲಿದ್ದಾರೆ. ಮೆರವಣಿಗೆ ಬಳ್ಳಾರಿಯಲ್ಲಿ ಮುಕ್ತಾಯಗೊಳ್ಳಲಿದೆ ಎಂದು ಹೇಳಿದರು.

**ಜೆಡಿಎಸ್ ಬೆಂಬಲ**

ಪಾದಯಾತ್ರೆಗೆ ಜೆಡಿಎಸ್ ಸಂಪೂರ್ಣ ಬೆಂಬಲ ನೀಡಲಿದೆ. ಅದರ ನಾಯಕರು ಉದ್ಘಾಟನಾ ಮತ್ತು ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಈ ಜನವಿರೋಧಿ, ಬಡವರ, ರೈತ, ಯುವಜನ ಮತ್ತು ಅಭಿವೃದ್ಧಿ ವಿರೋಧಿ ಕಾಂಗ್ರೆಸ್ ಸರ್ಕಾರದ ನಿಜಬಣ್ಣ ಬಹಿ



ರಂಗಪಡಿಸುವುದು ಮತ್ತು ರಾಜ್ಯದ ಜನರಲ್ಲಿ ಜಾಗೃತಿ ಮೂಡಿಸುವುದು ಪಾದ ಯಾತ್ರೆಯ ಉದ್ದೇಶವಾಗಿದೆ ಎಂದರು. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣದಲ್ಲಿ ನಾಗೇಂದ್ರ ಅವರ ಪಾತ್ರದ ಆರೋಪದ ಮೇಲೆ ಅವರನ್ನು ಸಂಪುಟದಿಂದ ತೆಗೆದುಹಾಕುವಂತೆ ಒತ್ತಾಯಿಸಲು ಬಿಜೆಪಿ ಈ ಪಾದಯಾತ್ರೆಯನ್ನು ಬಳಸಿಕೊಳ್ಳಲಿದೆ. ಭ್ರಷ್ಟ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡಬೇಕೆಂಬ ಬೇಡಿಕೆಯೊಂದಿಗೆ ಪ್ರಾರಂಭಿಸಿ, ಈ ಎಲ್ಲಾ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ನಾವು ನಿರ್ಧರಿಸಿದ್ದೇವೆ ಎಂದು ಹೇಳಿದರು.

ಸರ್ಕಾರವು ಬರಗಾಲ ಪೀಡಿತ ರೈತರ ಸಂಕಷ್ಟವನ್ನು ಪರಿಹರಿಸಲು ವಿಫಲವಾಗಿದೆ. ರಾಜ್ಯದಲ್ಲಿ ಸುಮಾರು 2.5 ಲಕ್ಷ ಹುದ್ದೆಗಳು ಭರ್ತಿಯಾಗಿಲ್ಲ, ವೃದ್ಧಾಪ್ಯ ಪಿಂಚಣಿ, ಸಂಧ್ಯಾ ಸುರಕ್ಷಾ ಸೌಲಭ್ಯಗಳು, ಬಡವರಿಗೆ ಮನೆಗಳು ಮತ್ತು ಗಂಗಾ ಕಲ್ಯಾಣ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಗೊಳಿಸಲಾಗುತ್ತಿಲ್ಲವೆಂದು ಆರೋಪಿಸಿದರು.

ವಿಧಾನಸಭೆ ಅಧಿವೇಶನ ಮೊಟಕುಗೊಳಿಸಿದ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಟೀಕಿಸಿದ ವಿಜಯೇಂದ್ರ ಅವರು, ಸರ್ಕಾರವು ಪ್ರಮುಖ ವಿಷಯಗಳ ಕುರಿತು ಚರ್ಚೆಗಳನ್ನು ತಪ್ಪಿಸಿದೆ. ಈ ಎಲ್ಲಾ ವಿಷಯಗಳನ್ನು ವಿಧಾನಸಭೆಯಲ್ಲಿ ಚರ್ಚಿಸಿದ್ದರೆ ಕಾಂಗ್ರೆಸ್ ಸರ್ಕಾರದ ಮುಖವಾಡ ಕಳಚುತ್ತಿತ್ತು ಎಂದರು.

ಶಿವಕುಮಾರ್ ಅವರು ಆಡಳಿತ ಮತ್ತು ಅಭಿವೃದ್ಧಿಗಿಂತ ರಿಯಲ್ ಎಸ್ಟೇಟ್ ಸಂಬಂಧಿತ ಯೋಜನೆಗಳ ಮೇಲೆ ಕೇಂದ್ರೀಕರಿಸುತ್ತಿದ್ದಾರೆ. ಅವರ ಆಸಕ್ತಿ ರಿಯಲ್ ಎಸ್ಟೇಟ್ ಸುತ್ತ ಸುತ್ತುತ್ತದೆ. ಪ್ರಸ್ತಾವಿತ ಬಿಡದಿ ಟೌನ್‌ಶಿಪ್, ಹುಟ್ಟೂರು ಕನಕಪುರದಲ್ಲಿ ವಿಮಾನ ನಿಲ್ದಾಣ ಮತ್ತು ನೈಸ್ ಯೋಜನೆಯನ್ನು ಸ್ವಾಧೀನಪಡಿಸಿಕೊಳ್ಳುವ ಸರ್ಕಾರದ ಕ್ರಮವನ್ನು ಉಲ್ಲೇಖಿಸಿ ವಿಜಯೇಂದ್ರ ಆರೋಪಿಸಿದರು.

ಪಾದಯಾತ್ರೆ ಸಮಯದಲ್ಲಿ ಉತ್ತರ ಕರ್ನಾಟಕ ಮತ್ತು ನೀರಾವರಿ ಯೋಜನೆಗಳ ಸಮಸ್ಯೆ ಗಳನ್ನು ಸಹ ಎತ್ತುತ್ತದೆ. ಸರ್ಕಾರವು ಮೀಸಲಾತಿ ವಿಚಾರದಲ್ಲಿ ಆಟವಾಡುತ್ತಿದೆ. ಒಬಿಸಿ ಮೀಸಲಾತಿ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿ ಯನ್ನು ಶೇ. ಮೂರರಿಂದ ಏಳಕ್ಕೆ ಹೆಚ್ಚಿಸಿತ್ತು ಎಂದರು.

# ಪರಿಷ್ಕೃತ ಕನಿಷ್ಠ ವೇತನ ಜಾರಿಗೊಳಿಸಲು ಆಗ್ರಹ

» ಮೊದಲನೇ ಪುಟದಿಂದ

ಪರಿಷ್ಕೃತ ವೇತನವನ್ನು ಕೆಲವು ಕಡೆ ಪಾವತಿಸಿ ನಂತರ ಏಕಾಏಕಿ ಹಿಂಪಡೆಯುತ್ತೇವೆ ಎಂದಿರುವುದು ನೌಕರರನ್ನು ಗೊಂದಲಕ್ಕೆ ಸಿಲುಕಿಸಲಾಗಿದೆ. ಸರ್ಕಾರ ಕೂಡಲೇ ತನ್ನ ನಿರ್ಧಾರ ಮರುಪರಿಶೀಲಿಸಿ ಪರಿಷ್ಕೃತ ಕನಿಷ್ಠ ವೇತನವನ್ನು ರಾಜ್ಯಾದ್ಯಂತ ಸಮರ್ಪಕವಾಗಿ ಜಾರಿಗೊಳಿಸ ಬೇಕು. ನೌಕರರ ಶ್ರಮಕ್ಕೆ ತಕ್ಕ ವೇತನ ದೊರೆಯುವಂತಾಗಬೇಕು. ಈ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರಲೆಂದೇ ಹೋರಾಟ ನಡೆಸಲಾಗಿದೆ ಎಂದರು.

ರಾಜ್ಯದ ವಿವಿಧ ಜಿಲ್ಲೆಗಳ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು, ತಾಲ್ಲೂಕು ಅಧ್ಯಕ್ಷರು ಹಾಗು ಸಾವಿರಾರು ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿ ತಮ್ಮ ಬೇಡಿಕೆ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸಿದರು. ನ್ಯಾಯಯುತ ವೇತನಕ್ಕಾಗಿ ನಡೆಯುತ್ತಿರುವ ಹೋರಾಟಕ್ಕೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ಒತ್ತಾಯಿಸಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ಜಿಲ್ಲಾ ಕಾರ್ಯದರ್ಶಿ ರಾಜಯ್ಯ, ಜಿಲ್ಲಾಧ್ಯಕ್ಷ ಮಂಜುನಾಥ್, ಮನು ಮಲ್ಲೇಶ್, ಕುಮಾರ್, ಲೋಕೇಶ್ ಮತ್ತಿತರರು ಹಾಜರಿದ್ದರು.

# ಹಾಸನದ ಮುಖ್ಯ ರಸ್ತೆಗಳೆಲ್ಲ ಕಾರು ಪಾರ್ಕಿಂಗ್ ತಾಣ

» ಮೊದಲನೇ ಪುಟದಿಂದ

ಮಠದ ಬಳಿ ಪಾದ ಚಾರಿಗಳು ಪ್ರಯಾಸಪಡುವಂತಾಗಿದೆ. ಬೆಳಿಗ್ಗೆ 8 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ರಸ್ತೆಯಲ್ಲೇ ವಾಹನಗಳು ನಿಂತಿರುತ್ತವೆ. ದೇವಸ್ಥಾನಕ್ಕೆ ಬರುವ ಜನರು ರಸ್ತೆಯ ಎಲ್ಲೆಂದರಲ್ಲಿ ತಮ್ಮ ವಾಹನ ಪಾರ್ಕ್ ಮಾಡುತ್ತಿದ್ದಾರೆ.

**ಕಣ್ಮುಚ್ಚಿ ಕುಳಿತ ಸಂಚಾರ ಪೊಲೀಸರು**

ಶಂಕರಮಠ ರಸ್ತೆ, ಆರ್.ಸಿ.ರಸ್ತೆ ಹಾಗು ಎಂ.ಜಿ.ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರ ಹೆಲ್ಮೆಟ್ ತಪಾಸಣೆಯಷ್ಟೇ ಸಂಚಾರ ಪೊಲೀಸರ ಕೆಲಸ ಎಂಬಂತಾಗಿದೆ. ಕಣ್ಮುಂದೆಯೇ ಮುಖ್ಯ ರಸ್ತೆ ಬದಿಯೇ ಕಾರು ನಿಲ್ಲಿಸಿ ಹೋದರು ಪೊಲೀಸರು ಪ್ರಶ್ನಿಸುತ್ತಿಲ್ಲ. ಇನ್ನು ಯಾವ ದಿನ ಯಾವ ಬದಿಗೆ ವಾಹನ ನಿಲ್ಲಿಸಬೇಕೆಂಬ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆಯಾದರೂ ನಗರದಲ್ಲಿ ಎಲ್ಲಿಯೂ ಅದು ಪಾಲನೆಯಾಗುತ್ತಿಲ್ಲ. ಹೆಲ್ಮೆಟ್ ಧರಿಸದವರಿಗೆ ದಂಡ ವಿಧಿಸುವ ಜವಾಬ್ದಾರಿಯನ್ನು ಸಂಚಾರ ಪೊಲೀಸರು ನಿಯಮ ಪಾಲನೆಗೂ ನೀಡಬೇಕೆಂಬ ಆಗ್ರಹ ಕೇಳಿಬಂದಿದೆ.

# ಬಿಜೆಪಿ ಕಾರ್ಯಕರ್ತರ ಅರೆಬೆತ್ತಲೆ ಪ್ರತಿಭಟನೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆ ಮಾಡಬೇಕೆಂದು ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಬಿಜೆಪಿ ಕಲೆ ಮತ್ತು ಸಾಹಿತ್ಯ ಪ್ರಾಕೋಷ್ಟ ಜಿಲ್ಲಾ ಸಂಚಾಲಕ ನಂಜುಂಡ ಮೈಮ್ ಅವರು ಮಾತನಾಡಿ, ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿ 10 ತಿಂಗಳು ಕಳೆದರೂ ಲೋಕಾರ್ಪಣೆ ಮಾಡಿಲ್ಲ. ಎರಡು ತಿಂಗಳಿಂದ ಆಗ್ರಹಿಸುತ್ತಿದ್ದರೂ ತಾಲ್ಲೂಕು ಆಡಳಿತದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆಂದು ದೂರಿದರು.

ಸೆ.20ರೊಳಗೆ ಪ್ರತಿಮೆ ಅನಾವರಣ ಮಾಡದಿದ್ದರೆ ರಾಜಕೀಯ ನಾಯಕರು ಹಾಗು ಪ್ರಗತಿ ಪರ ಸಂಘಟನೆಗಳ ಮುಖಂಡರೊಂದಿಗೆ ಅದ್ದೂರಿ ಕಾರ್ಯಕ್ರಮದೊಂದಿಗೆ ಪ್ರತಿಮೆ ಅನಾವ ರಣ ಮಾಡಲಾಗುವುದೆಂದು ಎಚ್ಚರಿಸಿದರು.

ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು. ಶ್ರವಣಬೆಳಗೊಳ ಮಂಡಲ ಅಧ್ಯಕ್ಷ ಪರಮ ಗಂಗಾಧರ್, ಪ್ರಧಾನ ಕಾರ್ಯದರ್ಶಿಗಳಾದ ಪ್ರಶಾಂತ್, ಗನ್ನಿ ವಿಶ್ವನಾಥ್, ಮಾಜಿ ಅಧ್ಯಕ್ಷ ರಂಗೇಗೌಡ, ಉಪಾಧ್ಯಕ್ಷ ಅಶೋಕ್ ಶೆಟ್ಟಿಹಳ್ಳಿ, ಸತೀಶ್ ಗೌಡಗೆರೆ, ಚನ್ನಕೇಶವ, ಮಣಿಕಂಠ, ಸಿ.ಜಿ.ಕುಮಾರ್ ಇತರರು ಭಾಗವಹಿಸಿದ್ದರು.

# ಇಂದಿನಿಂದ ರಾಜ್ಯಾದ್ಯಂತ ಸೀರತ್ ಅಭಿಯಾನ

• ಪ್ರಜೋದಯ ವರದಿ

**ಹಾಸನ:** ಪ್ರವಾದಿ ಮೊಹಮ್ಮದ್ ಅವರ ಜನ್ಮದಿನದ ಪ್ರಯುಕ್ತ ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ಆ.26 ರಿಂದ ಸೆ.6ರ ವರೆಗೆ ರಾಜ್ಯಾದ್ಯಂತ ಕ್ರಾಂತಿಯ ಜ್ಯೋತಿ-ಪ್ರವಾದಿ ಮೊಹಮ್ಮದ್ ಎಂಬ ಶೀರ್ಷಿಕೆಯಡಿ ಸೀರತ್ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಕಾರ್ಯಕರ್ತ ಆವೇಜ್ ಪಾಷ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಭಿಯಾನದ ಪ್ರಯುಕ್ತ ಸಾಹಿತಿ ಯೋಗೇಶ್ ಮಾಸ್ಟರ್ ಅವರು ರಚಿಸಿರುವ ಮಾನವ ಮನಸ್ಸಿನ ಕೃಷಿಕ ಮನದೊಡೆಯ ಪ್ರವಾದಿ ಮೊಹಮ್ಮದ್ ಹಾಗು ವಾರ್ತಾಭಾರತಿ ಪತ್ರಿಕೆ ಪ್ರಧಾನ ಸಂಪಾದಕ ಅಬ್ದುಸ್ಸಲಾಮ್ ಪುತ್ತಿಗೆ ಅವರ ಸಮಗ್ರ ಕ್ರಾಂತಿಯ ಜ್ಯೋತಿ ಬೆಳಗಿದ ಪೈಗಂಬ್ ಮೊಹಮ್ಮದ್(ಸ) ಎಂಬ ಎರಡು ಕೃತಿಗಳನ್ನು ರಾಜ್ಯಾದ್ಯಂತ ಬಿಡುಗಡೆಗೊಳಿಸಲಾಗುವುದು ಎಂದರು.




ಅಭಿಯಾನದ ಪ್ರಯುಕ್ತ ರಾಜ್ಯಾದ್ಯಂತ ವೈಯಕ್ತಿಕ ಭೇಟಿ, ಕ್ರಾಂತಿಯ ಜ್ಯೋತಿ ಪ್ರವಾದಿ ಮೊಹಮ್ಮದ್(ಸ) ಎಂಬ ಶೀರ್ಷಿಕೆಯಡಿ ವಿಚಾರಗೋಷ್ಠಿಗಳು, ಸಾರ್ವಜನಿಕ ಸಮಾವೇಶ, ಸಂವಾದ ಕಾರ್ಯಕ್ರಮ, ಚರ್ಚಾಗೋಷ್ಠಿಗಳು, ಸೀರತ್ ಪ್ರವಚನ, ಎಕ್ಸಿಬಿಷನ್, ಸಮಾಜ ಸೇವಾ ಚಟುವಟಿಕೆ, ಸೌಹಾರ್ದ ಸಂದೇಶಗಳು ಹೀಗೆ ವೈವಿಧ್ಯಮಯ ಕಾರ್ಯಕ್ರಮ ನಡೆಯ ಲಿವೆ ಎಂದರು.

ನಗರದ ಎನ್.ಆರ್.ವೃತ್ತದಲ್ಲಿರುವ ಇಸ್ಲಾಮಿಕ್ ಸೆಂಟರ್‌ನಲ್ಲಿ ಸೆ.2 ರಂದು ಮಧ್ಯಾಹ್ನ 12 ಗಂಟೆಗೆ ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಜೆ ವಿಚಾರ ಸಂಕಿರಣ ಹಾಗೂ ವೃದ್ಧಾಶ್ರಮ, ಅಂಧ ಮಕ್ಕಳ ಶಾಲೆಯಲ್ಲಿ ಹಣ್ಣು ಹಂಪಲು ವಿತರಿಸಲಾಗುವುದು. ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯದ ಡಾ|| ಗುರು ಬಸವರಾಜ್ ಯಲಗಚ್ಚಿನ ಮೊದಲಾದವರು ಭಾಗವಹಿಸುವರು. ಮಂಗಳೂರು ಶಾಂತಿ ಪ್ರಕಾಶನದ ವ್ಯವಸ್ಥಾಪಕರಾದ ಮಹಮ್ಮದ್ ಕುಂಞ ಅಧ್ಯಕ್ಷತೆ ವಹಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಅಲ್ ಅಮೀನ್ ಎಜುಕೇಷನಲ್ ಸೊಸೈಟಿ ಅಧ್ಯಕ್ಷ ಸಯ್ಯದ್ ತಾಜ್, ಹಾಸನ ಜಮಾಅತೆ ಇಸ್ಲಾಮಿ ಹಾಸನ ಅಧ್ಯಕ್ಷ ಅಜ್ಜರುಲ್ಲಾ ಖಾನ್ ಖಾಸ್ಮಿ, ಶಬ್ಬಿರ್ ಅಹಮದ್, ಮಹಮ್ಮದ್ ಎಹ್ತೇಶಾಮ್, ಫರೀದ್ ಅಹ್ಮದ್ ಖಾನ್ ಇದ್ದರು.

# ಸಂಬಂಧಿಕರ ಮನೆಗೆ ತೆರಳಿದ್ದ ಯುವಕ ದಾರುಣ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಂಬಂಧಿಕರನ್ನು ನೋಡಲೆಂದು ತೆರಳಿದ್ದ ಯುವಕ ಆಟೋ ಪಲ್ಟಿಯಾಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಸಾಣೇನಹಳ್ಳಿ ರಸ್ತೆಯ ಹಟ್ಟಿಲಕ್ಕಮ್ಮ ದೇವಾಲಯ ಸಮೀಪದ ಮಣ್ಣಿನ ರಸ್ತೆಯಲ್ಲಿ ನಡೆದಿದೆ.

ಬಿಹಾರದ ದೀಪಕ್‌ಕುಮಾರ್ ಮೃತ ದುರ್ದೈವಿ. ಕಳೆದ ಏಳು ವರ್ಷಗಳಿಂದ ಏಳು ಸಂಬಂಧಿಕರು ಕೂಲಿ ಕೆಲಸ ಮಾಡಿಕೊಂಡು ತಾಲ್ಲೂಕಿನ ಮಾರನಹಳ್ಳಿಯಲ್ಲಿ ಶೆಡ್ ಹಾಕಿ ಕೊಂಡಿದ್ದಾರೆ. ಸೋಮವಾರ ದೀಪಕ್‌ಕುಮಾರ್ ಶ್ರವಣಬೆಳಗೊಳದಲ್ಲಿರುವ ಸಂಬಂಧಿ ಸಂಜಯ್ ಕುಮಾರ್‌ನನ್ನು ಭೇಟಿಯಾಗಲು ಹೋಗಿದ್ದಾಗ ಅವಘಡ ಸಂಭವಿಸಿದೆ ಎನ್ನಲಾಗಿದೆ.

ರಾಮ್ ಸರದಾರ್ ಅವರು ಮಾರನಹಳ್ಳಿ ಹತ್ತಿರ ನಿರ್ಮಿಸಿಕೊಂಡಿರುವ ಶೆಡ್‌ಗೆ ಹಿರಿಸಾವೆಯಿಂದ ಕಬ್ಬಿಣದ ರಾಡ್‌ಗಳನ್ನು ಲೋಡ್ ಮಾಡಿಕೊಂಡು ಬರುತ್ತೇನೆಂದು ಸಂಜಯ್‌ಕುಮಾರ್ ಹೇಳಿದ್ದಾನೆ. ಆಗ ದೀಪಕ್‌ಕುಮಾರ್ ತಾನೂ ಜೊತೆಗೆ ಬರುವುದಾಗಿ ಹೋಗಿದ್ದಾನೆ. ರಾಡ್‌ಗಳನ್ನು ಲೋಡ್ ಮಾಡಿಕೊಂಡು ಬರುತ್ತಿದ್ದಾಗ ಚಾಲಕನ ನಿರ್ಲಕ್ಷ್ಯ ತಪ್ಪಿ ಆಟೋ ಮಣ್ಣಿನ ರಸ್ತೆಯಲ್ಲಿ ಪಲ್ಟಿಯಾಗಿದೆ. ಆಟೋ ಹಿಂಭಾಗ ನಿಂತಿದ್ದ ದೀಪಕ್ ಕುಮಾರ್ ಕೆಳಗೆ ಬಿದ್ದಾಗ ಕಬ್ಬಿಣದ ರಾಡ್ ತಲೆ ಮೇಲೆ ಬಿದ್ದು ಗಂಭೀರ ಗಾಯಗೊಂಡಿದ್ದ. ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಅಷ್ಟರೊಳಗೆ ಮೃತಪಟ್ಟಿದ್ದ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಲ್ನಾಡ್ ಪ್ರಾಥಮಿಕ ಶಾಲೆಗೆ ಸಮಗ್ರ ಪ್ರಶಸ್ತಿ

• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕಿನ ಅರೇಹಳ್ಳಿಯ ಮಲ್ನಾಡ್ ಆಂಗ್ಲ ಮಾಧ್ಯಮ ಶಾಲೆ ಹಾಗು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ತಾಲ್ಲೂಕು ಕ್ರೀಡಾಂಗಣದಲ್ಲಿ 2026-27ನೇ ಸಾಲಿನ ಅರೇಹಳ್ಳಿ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟ ನಡೆಯಿತು.

ಕ್ರೀಡಾಕೂಟದಲ್ಲಿ ಮಲ್ನಾಡ್ ಹಿರಿಯ ಪ್ರಾಥಮಿಕ ಶಾಲೆಯು ಸಮಗ್ರ ಪ್ರಶಸ್ತಿಗೆ ಭಾಜನ ವಾಯಿತು. ಜೊತೆಗೆ ಬಾಲಕರ ಚಾಂಪಿಯನ್, ಬಾಲಕಿಯರ ಚಾಂಪಿಯನ್, ಬಾಲಕರ ವೈಯಕ್ತಿಕ ಚಾಂಪಿಯನ್ ಹಾಗು ಬಾಲಕಿಯರ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿಗಳನ್ನು ಗೆದ್ದು ಬೀಗಿತು.

ಕ್ರೀಡಾಕೂಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಶಾಲೆಯ ಆಡಳಿತ ಮಂಡಳಿ ಸದಸ್ಯರು, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗು ಸಿಬ್ಬಂದಿ ಅಭಿನಂದಿಸಿದರು.

**ಪ್ರಶಸ್ತಿ ವಿವರ**

**ಬಾಲಕರ ವಿಭಾಗ:** ಸಂಜಯ್ 100 ಮೀ. ಓಟ (ಪ್ರಥಮ), ಡಿಸ್ಕಸ್ ಥ್ರೋ (ಪ್ರಥಮ), ಗುಂಡು ಎಸೆತ



(ಪ್ರಥಮ),ವೈಯಕ್ತಿಕ ಚಾಂಪಿಯನ್. ಖಲಂದರ್ ಶಾಹಿದ್ 600 ಮೀ. ಓಟ (ಪ್ರಥಮ), ಡಿಸ್ಕಸ್ ಥ್ರೋ (ದ್ವಿತೀಯ), ಉದ್ದ ಜಿಗಿತ (ಪ್ರಥಮ), ಮದನ್ 400 ಮೀ. ಓಟ (ದ್ವಿತೀಯ), ಉದ್ದ ಜಿಗಿತ (ತೃತೀಯ), ಹುಜೈರ್ 100 ಮೀ. ಓಟ (ಪ್ರಥಮ), 200 ಮೀ. ಓಟ (ತೃತೀಯ), ಸೈಯ್ಯದ್ ಮೊಹಸಿನ್ ಷಾ ಹುಸೇನ್ 600 ಮೀ. ಓಟ (ತೃತೀಯ), ಮೋಕ್ಷಿತ್ ಗುಂಡು ಎಸೆತ (ತೃತೀಯ), ಹರ್ಷಿತ್ ಎತ್ತರ ಜಿಗಿತ (ತೃತೀಯ)ದಲ್ಲಿ ಬಹುಮಾನ ಪಡೆದರು. **ಗುಂಪು ಆಟಗಳು:** ಕಬಡ್ಡಿ ಪ್ರಥಮ, ರಿಲೇ ಪ್ರಥಮ.

**ಬಾಲಕಿಯರ ವಿಭಾಗ:** ಸಂಯುಕ್ತ 200 ಮೀ. ಓಟ (ದ್ವಿತೀಯ), ಉದ್ದ ಜಿಗಿತ (ಪ್ರಥಮ), ನೂರ್ ಜೋಯಾ ಗುಂಡು ಎಸೆತ (ಪ್ರಥಮ), ಡಿಸ್ಕಸ್ ಥ್ರೋ (ಪ್ರಥಮ), ಆಫ್ರಾ ಎತ್ತರ ಜಿಗಿತ (ದ್ವಿತೀಯ), ಫಾತಿಮಾ ಜೋಹ್ರಾ ಬಿ. ಡಿಸ್ಕಸ್ ಥ್ರೋ (ದ್ವಿತೀಯ), ಮೈನಾ ಶೀತಲ್ ಉದ್ದ ಜಿಗಿತ (ತೃತೀಯ).

**ಗುಂಪು ಆಟಗಳು:** ರಿಲೇ ದ್ವಿತೀಯ, ವಾಲಿಬಾಲ್ ಪ್ರಥಮ ಹಾಗು ಥ್ರೋಬಾಲ್ ದ್ವಿತೀಯ ಸ್ಥಾನ ಪಡೆದಿದ್ದಾರೆ.

### ಎಐಟಿಯುಸಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ

# ಗೌರವ ಧನ ಹೆಚ್ಚಿಸಲು ಅಂಗನವಾಡಿ ನೌಕರರ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗೌರವ ಧನ ಹೆಚ್ಚಿಸಬೇಕು. ನಿವೃತ್ತ ನೌಕರರಿಗೆ ಗ್ರಾಚ್ಯುಟಿ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನ ವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್‌ನಿಂದ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಯಿತು.



ಕಳೆದ ಎಡ್ಮೂರು ತಿಂಗಳಿಂದ ಬಾಕಿ ಇರುವ ಗೌರವಧನವನ್ನು ತಕ್ಷಣ ಬಿಡುಗಡೆಗೊಳಿಸಬೇಕು. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಮೊದಲು 6ನೇ ಗ್ಯಾರಂಟಿಯಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ ರೂ. ಹಾಗು ಸಹಾಯಕಿಯರಿಗೆ 10 ಸಾವಿರ ರೂ. ಗೌರವ ಧನ ನೀಡುವುದಾಗಿ ತಿಳಿಸಲಾಗಿತ್ತು. ಆ ಪ್ರಕಾರ ಸರ್ಕಾರ ಕೂಡಲೇ ಗೌರವ ಧನ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ಎಐಟಿಯುಸಿ ಜಿಲ್ಲಾ ಖಜಾಂಚಿ ಪಿ.ಡಿ. ನಾಗರತ್ನ ಅವರು ಮಾತನಾಡಿ, ಹೊಸ ಸರ್ಕಾರ ರಚನೆಯಾಗಿ ವಿಧಾನಸಭಾ ಅಧಿವೇಶನವೂ ಮುಗಿದಿದೆ. ಎರಡು-ಮೂರು ತಿಂಗಳಿಂದ ಬಾಕಿ ಇರುವ ಗೌರವಧನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಎಸ್‌ಐಆರ್ ಸಮೀಕ್ಷೆ, ಜಾತಿ ಪ್ರಮಾಣ ಪತ್ರಗಳನ್ನು ಮನೆ-ಮನೆಗೆ ವಿತರಿಸುವುದು, ಗೃಹಲಕ್ಷ್ಮಿ ಸಮೀಕ್ಷೆ ಸೇರಿ ಅಂಗನವಾಡಿ ಕೆಲಸಕ್ಕೆ ಸಂಬಂಧಿಸದ ಹೆಚ್ಚುವರಿ ಕರ್ತವ್ಯಗಳಿಂದ ನಮ್ಮನ್ನು ಮುಕ್ತಗೊಳಿಸಬೇಕೆಂದು ಆಗ್ರಹಿಸಿದರು.

11ನೇ ವೇತನ ಆಯೋಗದ ಶಿಫಾರಸ್ಸು, ಗ್ರಾಚ್ಯುಟಿ ಸೇರಿ ಬಾಕಿ ಇರುವ ಸೌಲಭ್ಯ ಜಾರಿಗೊಳಿಸಬೇಕು. ಪ್ರಭಾರ ಭತ್ಯೆ ಹಾಗೂ ತುಟ್ಟಿಭತ್ಯೆ ಹೆಚ್ಚಿಸಬೇಕು. ಮಹಿಳಾ ಕಾರ್ಯಕರ್ತೆಯರಿಗೆ ಋತುಚಕ್ರದ ರಜೆ ಹಾಗು ಸಂಬಳ ಸಹಿತ ವೈದ್ಯಕೀಯ ರಜೆ ನೀಡಬೇಕು. ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ತರಗತಿ ಆರಂಭಿಸಿ 4 ವರ್ಷದೊಳಗಿನ ಮಕ್ಕಳನ್ನು ದಾಖಲಿಸಿಕೊಳ್ಳುತ್ತಿರುವುದರಿಂದ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾಗುತ್ತಿದ್ದು, ಈ ಸಮಸ್ಯೆಗೆ ಸರ್ಕಾರ ಸೂಕ್ತ ಪರಿಹಾರ ಕಂಡುಕೊಳ್ಳಬೇಕು. ಇದರ ಜೊತೆಗೆ ಜಿಲ್ಲೆ ಹಾಗು ತಾಲ್ಲೂಕು ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಎದುರಿಸುತ್ತಿರುವ ಸ್ಥಳೀಯ ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕೆಂದು ಒತ್ತಾಯಿಸಿದರು.

ಎಐಟಿಯುಸಿ ಜಿಲ್ಲಾ ಸಮಿತಿ ಅಧ್ಯಕ್ಷೆ ಎಸ್.ಎನ್.ಜಯಲಕ್ಷ್ಮಿ, ಕಾರ್ಯಾಧ್ಯಕ್ಷೆ ಲೀನಾ ಡಯಾಸ್, ಪ್ರಧಾನ ಕಾರ್ಯದರ್ಶಿ ಕೆ.ವೇದಾವತಿ, ಅಂಬಿಕ, ಜಯಲಕ್ಷ್ಮಿ ಇತರರಿದ್ದರು.

# ದೇಗುಲ, ಚರ್ಚ್, ಮಸೀದಿಗೆ ಏಕರೂಪ ಕಾನೂನು ಜಾರಿಗೊಳಿಸಿ

**ಹಾಸನ:** ಹಿಂದೂ ಧಾರ್ಮಿಕ ದತ್ತಿ ನಿಯಮದಂತೆ ಚರ್ಚ್, ಮಸೀದಿ, ದರ್ಗಾಗಳಿಗೂ ಧಾರ್ಮಿಕ ನೀತಿ ರಚಿಸಿ ಏಕರೂಪ ಕಾನೂನುಗೊಳಿಸುವ ಮೂಲಕ ಸರ್ಕಾರ ತನ್ನ ಅಧೀನಕ್ಕೆ ತೆಗೆದುಕೊಳ್ಳಲಿ ಎಂದು ಅಖಿಲ ಕರ್ನಾಟಕ ಖಾಸಗಿ ಹಿಂದೂ ದೇವಾಲಯಗಳ ಅರ್ಚಕರ ಒಕ್ಕೂಟದ ರಾಜ್ಯಾಧ್ಯಕ್ಷ ಡಾ.ಎಂ.ಎಸ್.ವಿ.ದೀಕ್ಷಿತ್ ಅವರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೂ ದೇವಾಲಯಗಳ ಎಲ್ಲಾ ಆರ್ಥಿಕ ವ್ಯವಹಾರ, ಹುಂಡಿ ಎಣಿಕೆ ಬಹಿರಂಗವಾಗಿ ನಡೆಯುತ್ತಿದೆ. ಅಂತೆಯೇ ಚರ್ಚ್, ಮಸೀದಿ, ದರ್ಗಾಗಳ ಆರ್ಥಿಕ ವ್ಯವಹಾರವೂ ಜನರಿಗೆ ಗೊತ್ತಾಗಬೇಕು. ಹಿಂದೂ ದೇವಾಲಯ ಗಳಿಗೆ ಕಾನೂನು ಮೇಲ್ವಿಚಾರಣೆ ಇದೆ, ಅದೇ ಅವರಿಗೆ ಏಕಿಲ್ಲ ಎಂದು ಪ್ರಶ್ನಿಸಿದ ಅವರು, ಎಲ್ಲರಿಗೂ ಏಕರೂಪದ ಕಾನೂನು ತನ್ನಿ ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಿದರು.

ಧಾರ್ಮಿಕ ದತ್ತಿ ದೇವಾಲಯಗಳಂತೆ, ಚರ್ಚ್, ದರ್ಗಾ, ಮಸೀದಿಗಳಿಗೂ ಅಧಿಕಾರಿಗಳನ್ನು ನೇಮಿಸಬೇಕು. ಈ ಮೂಲಕ ಆರ್ಥಿಕ ಆಡಳಿತದಲ್ಲೂ ಪಾರದರ್ಶಕ ತರಬೇಕು. ಶೀಘ್ರವೇ ಈ ತಾರತಮ್ಯ ನಿವಾರಣೆ ಆಗಬೇಕು. ರಾಜ್ಯದಲ್ಲಿ ಅಲ್ಪ ಸಂಖ್ಯಾತರ ತುಷ್ಟೀಕರಣ ಅತಿಯಾಗಿದೆ. ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಇನ್ನೊಂದು ಭಿನ್ನ ಕಾನೂನು ಏಕೆ ಎಂದು ಕೇಳಿದರು. ಅಲ್ಪ ಸಂಖ್ಯಾತ ಧಾರ್ಮಿಕ ಕೇಂದ್ರಗಳಿಗೆ ಬರುತ್ತಿರುವ ವಿದೇಶಿ ಹಣಕಾಸು ವಿಚಾರದಲ್ಲಿ ಸಮಗ್ರ ತನಿಖೆಗೆ ಸರ್ಕಾರ ಒಳಪಡಿಸಬೇಕು. ಅವರಿಗೆ ಕಾನೂನು ಮಾಡಲು ಆಗದಿದ್ದರೆ ಹಾಲಿ ಸರ್ಕಾರದ ಅಧೀನದಲ್ಲಿರುವ ದೇವಾಲಯಗಳನ್ನು ಮುಕ್ತಗೊಳಿಸಿ ಹಿಂದೂಗಳ ಟ್ರಸ್ಟ್ ರಚಿಸಿ ದೇವಾಲಯಗಳ ಅಭಿವೃದ್ಧಿಗೆ ಸರ್ಕಾರ ಸಹಕಾರ ನೀಡಬೇಕೆಂದು ಆಗ್ರಹಿಸಿದರು.

ಚನ್ನರಾಯಪಟ್ಟಣ ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್ ದೊಡ್ಡಗನ್ನಿ ಅವರು ಮಾತನಾಡಿ, ಸರ್ಕಾರ ಬಿಡುಗಡೆ ಮಾಡುವ ತಸ್ತಿಕ್ ಹಣ ಯಾವುದಕ್ಕೂ ಸಾಲುತ್ತಿಲ್ಲ, ಎಷ್ಟೋ ವೇಳೆ ಪೂಜೆಗೆ ಎಣ್ಣೆ ಇರುವುದಿಲ್ಲ ಎಂದು ಬೇಸರ ಹೊರ ಹಾಕಿದರು. ಜಿಲ್ಲಾ ಕಾರ್ಯದರ್ಶಿ ವಿಜಯಕುಮಾರ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019